ಅಧ್ಯಾಯ ೯

# ಆಡಳಿತ ಮತ್ತು ರಾಜಸ್ವ

## ಸಾಮಾನ್ಯ ಆಡಳಿತ ಮತ್ತು ಕಂದಾಯ

ಹಿಂದಿನ ಶತಮಾನದಲ್ಲಿ ಪ್ರಜೆಗಳ ಹಾಗೂ ಅವರ ಆಸ್ತಿಪಾಸ್ತಿ ರಕ್ಷಣೆ ಮತ್ತು ಈ ಕಾರಣಕ್ಕಾಗಿ ಕಂದಾಯ ವಸೂಲಿ ಇಷ್ಟಕ್ಕೆ ಮಾತ್ರ ಸಾಮಾನ್ಯ ಆಡಳಿತ ಸೀಮಿತಗೊಂಡಿತ್ತು. ಪೋಲೀಸ್, ಜೈಲುಗಳು ಹಾಗೂ ನ್ಯಾಯಾಂಗ ಭದ್ರತೆಯ ಸಂಕೇತಗಳಾಗಿದ್ದರೆ, ಕಂದಾಯ ಇಲಾಖೆ, ರಿಜಿಸ್ಟ್ರೇಷನ್ ಮತ್ತು ಸ್ಟಾಂಪ್ಸ್ ಇಲಾಖೆಗಳು, ಸರ್ಕಾರದ ಇತರೆ ಇಲಾಖೆಗಳಾಗಿದ್ದವು. ರಸ್ತೆ, ಸೇತುವೆ, ಕಟ್ಟಡಗಳ ಉಸ್ತುವಾರಿಯ ಲೋಕೋಪಯೋಗಿ ಇಲಾಖೆ ಮತ್ತೊಂದು ಪ್ರಮುಖ ಇಲಾಖೆಯಾಗಿದ್ದಿತು. ಶೈಕ್ಷಣಿಕ ಹಾಗೂ ರಾಜಕೀಯ ಜಾಗೃತಿಯಿಂದಾಗಿ ಇತರೆ ಇಲಾಖೆಗಳಾದ ಕೃಷಿ, ವೈದ್ಯಕೀಯ ಹಾಗೂ ಸಹಕಾರ ಇಲಾಖೆಗಳ ಅವಶ್ಯಕತೆ ಕಂಡು ಬಂದಿತು. ಈ ಶತಮಾನದ ಎರಡು ಹಾಗೂ ಮೂರನೇ ದಶಕಗಳಲ್ಲಿ ಈ ಇಲಾಖೆಗಳ ಅಭಿವೃದ್ಧಿಯಾಯಿತು. ಪ್ರಾರಂಭದಲ್ಲಿ ಗುಲಬರ್ಗಾ ಜಿಲ್ಲೆ ಹೈದರಾಬಾದ್ ರಾಜ್ಯಕ್ಕೆ ಸೇರಿತ್ತು. ಇದರ ಆಡಳಿತ ಗುಲಬರ್ಗಾ, ತಾಂಡೂರು ಹಾಗೂ ಯಾದಗೀರಿ ಉಪವಿಭಾಗಳನ್ನೊಂಡು ಒಟ್ಟು ೧೨ ತಾಲೂಕುಗಳನ್ನು ಹೊಂದಿತ್ತು. ತದನಂತರ ತೆಲುಗು ಭಾಷಿಕರ ಪ್ರದೇಶಗಳಾದ ತಾಂಡೂರು ಹಾಗೂ ಕೋಡಂಗಲ್‌ಗಳನ್ನು ಆಂಧ್ರಪ್ರದೇಶಕ್ಕೆ ವರ್ಗಾಯಿಸಲಾಯಿತು. ಪ್ರಸ್ತುತ ಜಿಲ್ಲೆ ಹತ್ತು ತಾಲೂಕುಗಳನ್ನೊಳಗೊಂಡಿದೆ.

ಜಿಲ್ಲೆಯಲ್ಲಿ ಸಾಮಾನ್ಯ ಆಡಳಿತ ಮುಖ್ಯವಾಗಿ ಜಿಲ್ಲಾಧಿಕಾರಿಗಳ ಬಳಿ ಇರುತ್ತದೆ. ಇದಲ್ಲದೆ ಬೇರೆ ಬೇರೆ ಇಲಾಖೆಗಳಿಗೆ ಇಲಾಖೆಯ ಮುಖ್ಯಸ್ಥರು ಜಿಲ್ಲೆಯ ವ್ಯಾಪ್ತಿಯಲ್ಲಿ ಇರುತ್ತಾರೆ. ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟಂತೆ ಇರುವ ಅಧಿಕಾರಿಗಳ ಬಗ್ಗೆ ಸ್ಥೂಲವಾಗಿ ವಿವರಣೆ ಕೊಡಲಾಗುಗಿದೆ. ಇತರ ಇಲಾಖೆಗಳ ಬಗ್ಗೆ 'ಇತರ ಇಲಾಖೆಗಳು' ಎಂಬ ಅಧ್ಯಾಯದಲ್ಲಿ ವಿವರಣೆ ಕೊಡಲಾಗಿದೆ.

## ಜಿಲ್ಲಾಧಿಕಾರಿ

ಜಿಲ್ಲೆಯ ಸಾಮಾನ್ಯ ಆಡಳಿತವನ್ನು ಜಿಲ್ಲಾಧಿಕಾರಿ ನಿರ್ವಹಿಸುತ್ತಾರೆ. ಇದಲ್ಲದೆ ಇವರು ಜಿಲ್ಲಾದಂಡಾಧಿಕಾರಿಯೂ ಆಗಿರುತ್ತಾರೆ. ಜಿಲ್ಲಾ ಕಂದಾಯ ಆಡಳಿತಾಧಿಕಾರದೊಂದಿಗೆ ಇವರು ಜಿಲ್ಲಾ ರಿಜಿಸ್ಟ್ರಾರ್, ಡೆಪ್ಯೂಟಿ ಡೆವಲಫ್‌ಮೆಂಟ್ ಕಮಿಷನರ್, ಜಿಲ್ಲಾ ಅಡ್ವೈಸರ್, ಸಮಿತಿಯ ಅಧ್ಯಕ್ಷ, ಜಿಲ್ಲಾ ಕುಟುಂಬಯೋಜನಾಧಿಕಾರಿ, ಹಾಗೂ ಜಿಲ್ಲಾ ಅಭಿವೃದ್ಧಿ

ಮಂಡಳಿಗಳ ಅಧಿಕಾರಿ ಈ ಕೆಲಸಗಳನ್ನು ಸಹ ನಿರ್ರಹಿಸುವರು. ಇವರು ಜಿಲ್ಲಾ ಖಜಾನಾಧಿಕಾರಿಯೂ ಹೌದು. ವಿಭಾಗಾಧಿಕಾರಿಗಳ ಕೆಲಸ ನಿರ್ವಹಿಸುವ ಇವರು ಮೈಸೂರು ಲ್ಯಾಂಡ್ ಅಕ್ವೈಸಿಷನ್ ಕಾಯಿದೆ. ಹೈದರಾಬಾದ್ ಎಂಡೋಮೆಂಟ್ ಕಾಯಿದೆ. ಹೈದರಾಬಾದ್ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಕಾಯಿದೆ. ಮೈಸೂರು ಲ್ಯಾಂಡ್ ರಿಕಾರ್ಡ್ಸ್ ಅಫ್ ರೈಟ್ಸ್ ಕಾಯಿದೆ. ಹೈದರಾಬಾದ್ ಕೋರ್ಟ್ ಅಫ್ ವಾರ್ಡ್ಸ್ ಕಾಯಿದೆ, ಮೈಸೂರು ವಿಲೇಜ್ ಪಂಚಾಯತ್ ಮತ್ತು ಲೋಕಲ್ ಬೋರ್ಡ್ಸ್ ಕಾಯಿದೆ, ಇವುಗಳಡಿ ಹಲವು ರೀತಿಯ ಅಧಿಕಾರ ಚಲಾಯಿಸುತ್ತಾರೆ.

**ಕಂದಾಯ ಕರ್ತವ್ಯಗಳು**

ಭೂಕಂದಾಯ ಸಾಮಾನ್ಯವಾಗಿ (ಅ) ಕೃಷಿ (ಆ) ಕೃಷಿಯೇತರ ಹಾಗೂ (ಇ) ಇತರೆ ಈ ಮೂರು ವಿಧಗಳಲ್ಲಿ ನಿರ್ಧರಿಸಲ್ಪಡುತ್ತದೆ. ಈ ಕಂದಾಯವನ್ನು ವಸೂಲು ಮಾಡಿ, ಇದರ ಲೆಕ್ಕ ಪತ್ರಗಳ ಉಸ್ತುವಾರಿ ನೋಡಿಕೊಳ್ಳುವುದು ಜಿಲ್ಲಾಧಿಕಾರಿಗಳ ಕರ್ತವ್ಯವಾಗಿದೆ. ಭೂಕಂದಾಯ ಹಾಗೂ ನೀರಿನ ದರಗಳ ವಿಧಿಯಡಿ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಅಧಿಕಾರವಿರುತ್ತದೆ. ಕಂದಾಯ ವ್ಯಾಜ್ಯಗಳ ನಿರ್ವಹಣೆಯಲ್ಲಿ ಇವರು ನ್ಯಾಯಾಂಗ ಅಧಿಕಾರವನ್ನು ಹೊಂದಿರುತ್ತಾರೆ. ಜಿಲ್ಲೆಯ ಮುಜರಾಯಿ ಸಂಸ್ಥೆಗಳು ಇವರ ಆಡಳಿತದಡಿಯಲ್ಲಿಯೇ ಇವೆ. ನ್ಯಾಯಾಂಗ ಹಾಗೂ ಪೋಲೀಸ್ ಇಲಾಖೆಗಳ ಹೊರತು ಇವರು ಎಲ್ಲಾ ಸರ್ಕಾರಿ ಕಛೇರಿಗಳ ತಪಾಸಣೆ ಮಾಡುವ ಅಧಿಕಾರ ಹೊಂದಿರುತ್ತಾರೆ.

**ನ್ಯಾಯಾಂಗ ಕರ್ತವ್ಯ**

ಜಿಲ್ಲಾ ದಂಡಾಧಿಕಾರಿಯಾದ ಜಿಲ್ಲಾಧಿಕಾರಿಗಳು ಜಿಲ್ಲೆಯ ಕಾನೂನು ಹಾಗೂ ಶಿಸ್ತು ಪರಿಪಾಲನೆಗೆ ಹೊಣೆಗಾರರಾಗಿರುತ್ತಾರೆ. ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸಿದ ನಂತರ ಇವರ ನ್ಯಾಯಾಂಗದ ಕರ್ತವ್ಯಗಳು ಕಡಿಮೆ ಯಾಗಿರುತ್ತವೆ. ಜಿಲ್ಲೆಯ ಸಕಲ ದಂಡಾಧಿಕಾರಿಗಳು ಇವರಡಿ ಕಾರ್ಯ ನಿರ್ವಹಿಸುವುದರಿಂದ ಇವರು ಕ್ರಿಮಿನಲ್ ಪ್ರೊಸಿಜರ್ ಕೋಡ್, ಕರ್ನಾಟಕ ಪೋಲೀಸ್ ಕಾಯಿದೆ ಇವುಗಳಡಿ ಶಾಂತಿ, ಶಿಸ್ತು ಕಾಪಾಡುವ ಅಧಿಕಾರ ಹೊಂದಿರುತ್ತಾರೆ. ಸಾಮಾಜಿಕ ಶಾಂತಿ ಕಾಪಾಡಲು ಇವರು ನೇರವಾಗಿ ಪೋಲೀಸ್ ಇಲಾಖೆಯನ್ನು ನಿರ್ದೇಶಿಸುತ್ತಾರೆ. ಜೈಲು ಹಾಗೂ ಲಾಕಪ್ಪುಗಳ ಮೇಲೆ ಇವರ ನೇರ ಆಡಳಿತವಿರುತ್ತದೆ. ಸಾಮಾಜಿಕ ಭದ್ರತೆ ಕಾಪಾಡಲು ಸಂಶಯಾತ್ಮಕ ವ್ಯಕ್ತಿಗಳನ್ನು ಕಾನೂನಿನಂತೆ ಬಂಧಿಸುವ ಅಧಿಕಾರ ಹೊಂದಿರುತ್ತಾರೆ. ಇಂಡಿಯನ್ ಆರ್ಮ್ಸ್ ಕಾಯಿದೆ, ಇಂಡಿಯನ್ ಎಕ್ಸ್‌ಪ್ಲೋಸಿವ್ ಕಾಯಿದೆ, ಸಿನಿಮಾಟೋಗ್ರಫಿ ಕಾಯಿದೆಗಳ ಪ್ರಕಾರ ಇವರು ಲೈಸನ್ಸ್‌ಗಳನ್ನೂ, ಪರವಾನಗಿಯನ್ನೂ ನೀಡುವರು. ಅಸ್ಪೃಶ್ಯತಾ ನಿವಾರಣಾ ಕಾಯಿದೆಯ ಜಾರಿಯೂ ಇವರ ಆಡಳಿತಕ್ಕೊಳಪಟ್ಟಿದೆ. ವೀಸಾ ಹಾಗೂ ಪಾಸ್‌ಪೋರ್ಟ್ ನೀಡುವಲ್ಲಿ ಕಾಯಿದೆಯನ್ವಯ ಸರ್ಕಾರದ ಆದೇಶಗಳನ್ನು ಇವರು ಜಾರಿ ಮಾಡುವರು. ಜೀವನಾವಶ್ಯಕ ವಸ್ತುಗಳ ಕಾಯಿದೆಯನ್ವಯ ಆಹಾರ ಸಾಮಗ್ರಿಯ ಸಂಗ್ರಹಣೆ ಹಂಚುವಿಕೆಗೆ ಇವರು ಜವಾಬ್ದಾರರಾಗಿರುತ್ತಾರೆ. ಜಿಲ್ಲೆಯ ಉಪ - ರಿಜಿಸ್ಟ್ರಾರ್ ಕಛೇರಿಗಳ ವ್ಯವಸ್ಥಿತ ಕಾರ್ಯ ನಿರ್ವಹಣೆಯೂ ಇವರ ಹೊಣೆಯಾಗಿದೆ. ಪ್ರಾಂತೀಯ ಸಾರಿಗೆ ಕುಟುಂಬ ಕ್ಷೇಮಾಭಿವೃದ್ಧಿ ಸಮಿತಿ, ಜಿಲ್ಲಾ ಗ್ರಂಥಾಲಯ ಇವುಗಳಿಗೆಲ್ಲ ಇವರೇ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪರಿಷತ್ತು ಪ್ರಾರಂಭವಾಗುವವರೆಗೆ ಇವರೇ ಜಿಲ್ಲಾಭಿವೃದ್ಧಿ ಕಮಿಷನರ್ ಆಗಿದ್ದರು. ಜಿಲ್ಲಾ ಅಭಿವೃದ್ಧಿ ಸಂಸ್ಥೆಗಳನ್ನು ರದ್ದುಗೊಳಿಸಿದ ನಂತರ ಇವರ ಚಟುವಟಿಕೆಗಳೆಲ್ಲ ಜಿಲ್ಲಾ ಪರಿಷತ್‌ಗಳಿಗೆ ಸ್ಥಳಾಂತರಗೊಂಡಿದೆ.

**ವಿಶೇಷ ಜಿಲ್ಲಾಧಿಕಾರಿ**

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಉಸ್ತುವಾರಿಗಾಗಿ ಈ ಹುದ್ದೆ ಸೃಷ್ಟಿಯಾಯಿತು. ಪ್ರಸ್ತುತ ಭೂಕಂದಾಯ, ಬಾಕಿ ವಸೂಲಿ, ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಸಂಸ್ಥೆಗಳ ನೊಂದಣಿ, ಧಾರ್ಮಿಕ ಸಂಸ್ಥೆಗಳ ಆಡಳಿತ, ಕೃಷಿ ಭೂ ನಿರ್ವಹಣೆ, ಅರಣ್ಯ ಸಂಬಂಧಿತ ವಿಷಯ, ಮನೆ ಬಾಡಿಗೆ ಕಾಯಿದೆ. ಇನಾಂ ರದ್ದು ಕಾಯ್ದೆ ಈ ವಿಷಯಗಳನ್ನು ನಿರ್ವಹಿಸುವರು.

**ಅಸಿಸ್ಟೆಂಟ್ ಕಮಿಷನ್ (ಉಪವಿಭಾಗಾಧಿಕಾರಿ)**

ಜಿಲ್ಲೆಯಲ್ಲಿ ಆರು ಅಸಿಸ್ಟೆಂಟ್ ಕಮಿಷನರ್‌ಗಳಿದ್ದಾರೆ. ಅವರೆಂದರೆ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನ ಸಹಾಯಕರು, ಗುಲಬರ್ಗಾ ಉಪವಿಭಾಗ, ಯಾದಗೀರ್ ಉಪವಿಭಾಗ ಹಾಗೂ ಸೇಡಂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರ್

ಹಾಗೂ ಖಜಾನಾಧಿಕಾರಿ. ಇವರೆಲ್ಲ ಕಂದಾಯ ಆಡಳಿತ ನಡೆಸಲು ಜಿಲ್ಲಾಧಿಕಾರಿಗಳಿಗೆ ನೆರವಾಗುವರು. ಗುಲಬರ್ಗಾ ಸೇಡಂ ಹಾಗೂ ಯಾದ್‌ಗಿರ್‌ನ ಅಸಿಸ್ಟೆಂಟ್ ಕಮಿಷನರ್‌ಗಳು ತಂತಮ್ಮ ಉಪ ವಿಭಾಗಗಳನ್ನು ನೇರವಾಗಿ ನಿರ್ವಹಿಸುತ್ತಾರೆ. ಜಿಲ್ಲಾಧಿಕಾರಿಗಳ ಆದೇಶಗಳನ್ನೂ ಇವರು ಪರಿಪಾಲಿಸುತ್ತಾರೆ. ತಂತಮ್ಮ ಉಪವಿಭಾಗಗಳ ದಂಡಾಧಿಕಾರಿಗಳೂ ಆಗಿರುತ್ತಾರೆ. ಖಜಾನಾಧಿಕಾರಿ ಜಿಲ್ಲೆಯ ಖಜಾನೆಗಳ ಮೇಲೆ ಅಧಿಕಾರ ಹೊಂದಿರುತ್ತಾರೆ.

### ತಹಸೀಲ್ದಾರ್

ಇವರು ತಾಲೂಕು ಮಟ್ಟದ ಸರಕಾರಿ ಪ್ರತಿನಿಧಿ. ಅಸಿಸ್ಟೆಂಟ್ ಕಮಿಷನರ್ ಮೂಲಕ ಇವರು ಜಿಲ್ಲಾಧಿಕಾರಿಗಳಿಗೆ ಜವಾಬ್ದಾರರಾಗಿರುತ್ತಾರೆ. ತಹಸೀಲ್ದಾರರು ಭೂಸುಧಾರಣಾ ಕಾಯಿದೆ. ಕಂದಾಯ ಕಾಯಿದೆಗಳನ್ವಯ ತಮ್ಮಲ್ಲಿರುವ ಅಧಿಕಾರ ಚಲಾಯಿಸುತ್ತಾರೆ. ಗ್ರಾಮಗಳ ನಿವೇಶನಗಳ ವಿಷಯದಲ್ಲಿ ವ್ಯಾಜ್ಯ ಪರಿಹರಿಸುವುದು, ಸರಕಾರಿ ನಿವೇಶನ ಇತರರು ಸ್ವಾಧೀನಪಡಿಸಿಕೊಳ್ಳದಂತೆ ನೋಡಿಕೊಳ್ಳುವುದು ಇವರ ಕರ್ತವ್ಯ. ಅಭಿವೃದ್ಧಿಗಾಗಿ ಸಾಲ ಪಡೆದಿರುವ ಜಮೀನಿನ ತಪಾಸಣೆ ಮಾಡುವುದು, ಕಂದಾಯ ವಸೂಲಿ, ಇತರೆ ಸರಕಾರದ ಸಾಲ ವಸೂಲಿ, ನೀರಾವರಿ ಬಾಕಿ ವಸೂಲಿ, ಇವು ಇವರ ಕರ್ತವ್ಯಗಳು. ಆಹಾರ ಧಾನ್ಯ ಸಂಗ್ರಹಣೆ, ನ್ಯಾಯಬೆಲೆ ಅಂಗಡಿಗಳ ಮೂಲಕ ಇದರ ಹಂಚಿಕೆ ಇವು ಇವರ ಕೆಲಸ. ಜನ ಸಾಮಾನ್ಯರಿಗೆ ಸೇರಬೇಕಾದ ಆಹಾರ ಪದಾರ್ಥಗಳ ಶೇಖರಣೆಯಲ್ಲಿ ವ್ಯತ್ಯಾಸ ಕಂಡರೆ ಅದನ್ನು ಇವರೇ ಸರಪಡಿಸಬೇಕು. ವೃದ್ಧಾಪ್ಯವೇತನ ಇವರೇ ಮಂಜೂರು ಮಾಡಬಹುದು. ಇವರೇ ತಾಲೂಕು ದಂಡಾಧಿಕಾರಿಗಳು ಚುನಾವಣೆಯ ಪಟ್ಟಿಯನ್ನು ತಯಾರಿಸುವುದು ಇವರ ಕರ್ತವ್ಯ. ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಯಾಗಿ ತಾಲೂಕು ಮಟ್ಟದ ಚುನಾವಣೆಯ ಹೊಣೆ ಹೊತ್ತಿರುತ್ತಾರೆ.

### ಕ್ಷೇತ್ರಾಭಿವೃದ್ಧಿ ಅಧಿಕಾರಿ

ಪ್ರತೀ ತಾಲೂಕನ್ನು ಸಮುದಾಯ ಅಭಿವೃದ್ಧಿ ಕ್ಷೇತ್ರವೆಂದು ಪರಿಗಣಿಸಿ ಇವರು ತಾಲೂಕು ಮಟ್ಟದ ಅಧಿಕಾರಿಯಾಗಿರುತ್ತಾರೆ. ಇತ್ತೀಚಿನವರೆಗೆ (೧೯೮೭) ಇವರು ತಾಲೂಕು ಅಭಿವೃದ್ಧಿ ಮಂಡಳಿಯ ಅಧಿಕಾರಿ ಆಗಿದ್ದರು. ೧೯೫೯ರ ಗ್ರಾಮ ಪಂಚಾಯತ್ ಕಾಯಿದೆ ಹಾಗೂ ಲೋಕಲ್ ಬೋರ್ಡ್ ಕಾಯ್ದೆಯನ್ವಯ ದತ್ತವಾದ ಅಧಿಕಾರಗಳನ್ನು ಇವರು ಹೊಂದಿದ್ದರು. ೧.೪.೮೭ರಿಂದ ಇವರ ಕಂದಾಯ ಮೇಲಿನ ಅಧಿಕಾರ ರದ್ದಾಗಿರುತ್ತದೆ. ತಾಲೂಕು ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಇವರು ಪಂಚಾಯತಿಯ ಅಡಿಯಲ್ಲಿ ಇವರೀಗ ಕಾರ್ಯ ನಿರ್ವಹಿಸುತ್ತಿದ್ದಾರೆ.

### ರೆವಿನ್ಯೂ ಇನ್ಸ್‌ಪೆಕ್ಟರ್ (ಕಂದಾಯ ನಿರೀಕ್ಷಕ)

ಜಿಲ್ಲೆಯ ಪ್ರತೀ ತಾಲೂಕನ್ನು ಹೋಬಳಿಗಳಾಗಿ ವಿಂಗಡಿಸಲಾಗಿದೆ. ಇವು ರೆವಿನ್ಯೂ ಇನ್ಸ್‌ಪೆಕ್ಟರ್‌ರರ ಆಡಳಿತದಲ್ಲಿರುತ್ತವೆ. ಕಂದಾಯ ವಿಷಯದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರುರು ತಹಸೀಲ್ದಾರರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಕಂದಾಯ ಇಲಾಖೆಯ ಆದೇಶಗಳನ್ನು ಅಳವಡಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸುತ್ತಾರೆ. ಇವರು ಗ್ರಾಮ ಲೆಕ್ಕಾಧಿಕಾರಿಗಳ ಕಾರ್ಯಾಚರಣೆಯನ್ನು ಪರಿಶೀಲಿಸುವುದೇ ಅಲ್ಲದೆ ನಿವೇಶನದ ಸರಹದ್ದು ಪರಿಶೀಲನೆ, ಸರಕಾರಿ ಭೂಮಿ ಇತರರು ಸ್ವಾಧೀನ ಪಡಿಸಿಕೊಳ್ಳದಂತೆ ನೋಡುವುದೂ, ಇವೇ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಾರೆ. ಇದಲ್ಲದೆ ಕಾಲ ಕಾಲಕ್ಕೆ ತಹಸೀಲ್ದಾರರು ವಹಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

### ಗ್ರಾಮಾಧಿಕಾರಿ

ಬಾರಾಬಲೂತಿ ಪದ್ಧತಿಯಡಿ ಗ್ರಾಮಾಡಳಿತವನ್ನು ಮೊದಲು ಗ್ರಾಮಗಳ ಅಧಿಕಾರಿಗಳಿಗೆ ವಹಿಸಲಾಗಿದ್ದಿತು. ತಳಾರಿಗಳಿಲ್ಲದಾಗ ತೋಟಿಗಳು ಸರಕಾರಿ ಅಧಿಕಾರಿಗಳ ಮಾರ್ಗದರ್ಶಿಗಳಾಗಿದ್ದರು. ಸಕಲ ಭೂ ವ್ಯಾಜ್ಯಗಳಲ್ಲಿ ಹಾಗೂ ಸರಹದ್ದು ಮನಸ್ತಾಪಗಳಲ್ಲಿ ತೋಟಿಗಳ ಸಾಕ್ಷ್ಯ ಮಹತ್ವದ್ದಾಗಿದ್ದಿತು. ತಳಾರಿಗಳು ಗ್ರಾಮ ರಕ್ಷಕರಾಗಿದ್ದು, ಗ್ರಾಮಕ್ಕೆ ಬರುವ ಅನ್ಯರ ಬಗ್ಗೆ ನಿಗಾ ಇಡುತ್ತಿದ್ದರು. ೧೯೭೦ ರಲ್ಲಿ ಶಾನುಭೋಗಿಕೆ ರದ್ದಾದಾಗ ಗ್ರಾಮಾಡಳಿತ ಗ್ರಾಮಾಧಿಕಾರಿಗಳಿಂದ ನಡೆಯುತ್ತಿದೆ. ಇವರು ಗ್ರಾಮಕಂದಾಯ ವಿಷಯದಲ್ಲಿ ಮೂಲ ಹಂತದ ಅಧಿಕಾರಿಯಾಗಿದ್ದಾರೆ. ೧೯೮೭ರವರೆಗೆ ಇವರನ್ನು ಗ್ರಾಮ ಕಾರ್ಯದರ್ಶಿ ಎನ್ನುತ್ತಿದ್ದರು. ಇವರಿಗೆ ಸಹಾಯಕರಾಗಿ ಗ್ರಾಮ ಸೇವಕರು ಕೆಲಸ ಮಾಡುತ್ತಾರೆ.

## ನಾಡ ಕಛೇರಿ

ಕಂದಾಯಾಡಳಿತದ ಹಾಗೂ ತಾಲೂಕು ಕಛೇರಿಯ ಕೆಲಸದ ಹೊರೆ ತಗ್ಗಿಸಲು ಹೋಬಳಿ ಮಟ್ಟದ ನಾಡ ಕಛೇರಿಗಳನ್ನು ಆಗಸ್ಟ್ ೧೯೮೬ರಲ್ಲಿ ಪ್ರಾರಂಭಿಸಲಾಯಿತು. ತಹಸೀಲ್ದಾರರ ೨೧ಕಂದಾಯ ಕರ್ತವ್ಯಗಳಲ್ಲಿ ಒಂಬತ್ತನ್ನು ಈ ಕಛೇರಿಗಳು ನಿರ್ವಹಿಸುತ್ತವೆ.

## ಜಿಲ್ಲಾ ತರಭೇತಿ ಸಂಸ್ಥೆ

ಮೈಸೂರಿನ ಆಡಳಿತ ತರಭೇತಿ ಕೇಂದ್ರದಡಿ ಗುಲಬರ್ಗಾದಲ್ಲಿ ಜಿಲ್ಲಾ ತರಭೇತಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಎಲ್ಲಾ ಇಲಾಖೆಗಳ ಡಿ ಗ್ರೂಪ ನೌಕರರಿಗೆ ತರಬೇತಿ ನೀಡುವುದೇ ಇದರ ಉದ್ದೇಶ. ಇದಲ್ಲದೆ ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗರಿಗೆ, ವಾಣಿಜ್ಯ ತೆರಿಗೆ ಇಲಾಖೆಯ ನೌಕರರಿಗೆ ತರಭೇತಿ ಕಾರ್ಯಕ್ರಮವನ್ನು ನಡೆಸುತ್ತದೆ. ಕಂದಾಯ ಇಲಾಖೆಯ ನೌಕರರಿಗೆ ವಿಶೇಷ ತರಭೇತಿ ತರಗತಿಗಳನ್ನೂ ನಡೆಸುತ್ತದೆ. ಅರಣ್ಯ ಇಲಾಖೆಯ ರೇಂಜ್ ಅಧಿಕಾರಿಗಳಿಗೆ, ಅರಣ್ಯ ರಕ್ಷಕರಿಗೆ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯವರಿಗೆ ಅಲ್ಪಾವಧಿ ತರಬೇತಿ ತರಗತಿಗಳನ್ನು ನಡೆಸುತ್ತದೆ.

## ಧಾರ್ಮಿಕ ದತ್ತಿ ಇಲಾಖೆ

ರಾಜ್ಯದ ವಿವಿಧ ಭಾಗಗಳ ಧಾರ್ಮಿಕ ದತ್ತಿ ಸಂಸ್ಥೆಗಳು ೧೯೫೬ಕ್ಕೂ ಹಿಂದಿನ ಕಾಯ್ದೆಗಳಿಗೊಳಪಟ್ಟಿವೆ. ಇದಕ್ಕೆ ಸಂಬಂಧಪಟ್ಟ ರಾಜ್ಯಕ್ಕೆ ಅನ್ವಯಿಸುವ ಸಾಮಾನ್ಯ ಕಾಯ್ದೆಗಳಿನ್ನೂ ರೂಪಗೊಂಡಿಲ್ಲ. ನಿಜಾಮ್ ಸರ್ಕಾರದಲ್ಲಿ ತಹಸೀಲದಾರ್, ತಾಲೂಕುದಾರ ಹಾಗೂ ಸುಭೇದಾರರನ್ನು ನಾಜಮ್ ಎನ್ನುತ್ತಿದ್ದರು. ಇವರಿಗೆ ಈ ಕಾಯ್ದೆಗಳನ್ವಯ ಅಧಿಕಾರವಿದ್ದಿತು. ಪ್ರಸ್ತುತ ಜಿಲ್ಲಾಧಿಕಾರಿಯವರ ಉಸ್ತುವಾರಿಯಲ್ಲಿ ತಹಸೀಲ್ದಾರರು ಹಾಗೂ ಸ್ಥಳೀಯ ಅಧಿಕಾರಿಗಳು ಧಾರ್ಮಿಕದತ್ತಿ ಇಲಾಖೆಯ ಚಟುವಟಿಕೆಗಳನ್ನು ಅಧೀಕ್ಷಿಸುತ್ತಾರೆ. ಕಾಯಿದೆಯ ಅನುಷ್ಠಾನ ಚಾರಿಟಿ ಕಮಿಷನ್ ಅವರಿಂದ ನಡೆಯುತ್ತದೆ. ಕಾಯ್ದೆಯಡಿ ನಿಯೋಜಿಸಲ್ಪಟ್ಟಿರುವ ಜಿಲ್ಲಾಧಿಕಾರಿ ಹಾಗೂ ಸಹಾಯಕ ಕಮಿಷನರುಗಳು ಇವರಿಗೆ ಸಹಾಯ ಮಾಡುತ್ತಾರೆ. ಕಾಯಿದೆಯ ಹಲವಾರು ನಿಯಮಾವಳಿಗಳಡಿ ಚಾರಿಟ ಕಮಿಷನರರು ನ್ಯಾಯಾಂಗ ತನಿಖೆಯನ್ನು ಮಾಡಬಹುದಾಗಿದೆ. ಮುಜರಾಯಿ ಹಾಗೂ ದತ್ತಿ ಇಲಾಖೆಗಳ ಉಸ್ತುವಾರಿಯ ಮುಖ್ಯಸ್ಥರು ದತ್ತಿ ಆಯುಕ್ತರು. ದತ್ತಿ ಸಂಸ್ಥೆಗಳ ಅಭಿವೃದ್ಧಿ ಹಾಗೂ ಆಡಳಿತ ನಿರ್ವಹಿಸಲು ಇವರಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ದತ್ತಿ ಇಲಾಖೆಯ ಅಧಿಕಾರಿಗಳು ಸಹಾಯ ಮಾಡುವರು.

## ಕಂದಾಯ ಆಡಳಿತ

ಸರ್ಕಾರಕ್ಕೆ ನಿರಂತರ ಆದಾಯವನ್ನು ಒದಗಿಸುವ ಹಲವಾರು ಪ್ರಮುಖ ಇಲಾಖೆಗಳಲ್ಲಿ ಕಂದಾಯ ಇಲಾಖೆಯು ಒಂದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವ ಕಂದಾಯ ಆಡಳಿತ ವ್ಯವಸ್ಥೆಯು ಕಾಲಕಾಲಕ್ಕೆ ಉಂಟಾದ ರಾಜಕೀಯ ಸಾಮಾಜಿಕ ಆರ್ಥಿಕ ಬದಲಾವಣೆಗಳಿಗೆ ತಕ್ಕಂತೆ ಸ್ಪಂದಿಸುತ್ತಾ ಅನೇಕ ಮಾರ್ಪಾಡುಗಳನ್ನು ಹೊಂದಿರುವುದು. ಮನುವಿಗಿಂತ ಮೊದಲೇ ವ್ಯಾಪಕವಾಗಿದ್ದ ಸ್ಥಳೀಯ ಪದ್ದತಿಗಳ ಕಾಲದಿಂದಲೂ ಭೂ ಕಂದಾಯವೇ ಸರ್ಕಾರದ ಪ್ರಮುಖ ಆದಾಯದ ಮೂಲವಾಗಿತ್ತು. ಮನುವಿನ ಪ್ರಕಾರ ಸಾಮಾನ್ಯ ಸಂದರ್ಭಗಳಲ್ಲಿ ಭೂಕಂದಾಯವು ಭೂಮಿಯ ಹುಟ್ಟುವಳಿಯ ೧/೬ ರಿಂದ ೧/೧೨ರ ಭಾಗವಾಗಿದ್ದರೆ ವಿಶೇಷ ಸಂದರ್ಭಗಳಲ್ಲಿ ಅಂದರೆ ಯುದ್ಧ ಮುಂತಾದ ಸಂದರ್ಭಗಳಲ್ಲಿ ಒಟ್ಟು ಹುಟ್ಟುವಳಿಯ ೧/೪ರ ಭಾಗವನ್ನು ರೈತರು ಕಂದಾಯ ರೂಪದಲ್ಲಿ ಪ್ರಭುತ್ವಕ್ಕೆ ಒಪ್ಪಿಸಬೇಕಾಗುತ್ತಿತ್ತು. ಕರ್ನಾಟಕದಲ್ಲಿ ಮುಸ್ಲೀಮ ಸುಲ್ತಾನರನ್ನು ಒಳಗೊಂಡಂತೆ ಇದು ಎಲ್ಲ ರಾಜರ ಆಳ್ವಿಕೆಗೂ ಬುನಾದಿಯಾಗಿತ್ತು. ಸುಗ್ಗಿಯ ಕಾಲದಲ್ಲಿ ಕಣದಲ್ಲಿ ರಾಶಿಯ ಒಂದು ಪಾಲನ್ನು ಪಡೆಯುವುದು ಕಂದಾಯ ವಸೂಲಿಯ ಅತ್ಯಂತ ಪ್ರಾಚೀನ ಪದ್ಧತಿಯಾಗಿತ್ತು. ಈ ಕಂದಾಯ ವಸೂಲಿಯ ವ್ಯವಸ್ಥೆ ಹಳ್ಳಿಯ ಮುಖ್ಯಸ್ಥರಾದ ಗೌಡ, ಪಟೇಲರ ಮೂಲಕ ನಡೆಯುತ್ತಿತ್ತು. ಭೂಕಂದಾಯ ವ್ಯವಸ್ಥೆ ವ್ಯಾಪಿಸಿದಂತೆ ಅದರ ವಸೂಲಿ ವ್ಯವಸ್ಥೆಯನ್ನು ನಿರ್ವಹಿಸಲು ಹಳ್ಳಿಯ ಮುಖ್ಯಸ್ಥ ಮತ್ತು ಸರ್ಕಾರದ ನಡುವೆ ಅನೇಕ ನಾಗರಿಕ ಅಧಿಕಾರಿಗಳನ್ನು ನೇಮಕಗೊಳಿಸಲಾಯಿತು. ಅಧಿಕಾರಿಗಳ ಒಡೆತನದಲ್ಲಿ ಅನೇಕ ಹಳ್ಳಿಗಳು ಇರುತ್ತಿದ್ದು,

ಕೆಲವು ವಿಶೇಷ ಸಂದರ್ಭಗಳಲ್ಲಿ ಸಾವಿರಾರು ಹಳ್ಳಿಗಳು ಇರುತ್ತಿದ್ದವು. ಕಂದಾಯ ವಸೂಲಿಯ ಸೇವೆಗೆ ಪ್ರತಿಯಾಗಿ ಅವರಿಗೆ ರಾಜಸ್ವದಲ್ಲಿ ನಿಗದಿತ ಭಾಗ, ಅಥವಾ ಭೂಮಿಯ ಕೊಡುಗೆ, ಮುಂತಾದವುಗಳಿಂದ ಅವರ ಸೇವೆಯನ್ನು ಗೌರವಿಸಲಾಗುತ್ತಿತ್ತು.

ಈ ಜಿಲ್ಲೆಯಲ್ಲಿ ಶಾತವಾಹನರ ಆಳ್ವಿಕೆಯ ಕುರುಹುಗಳನ್ನು ಕಾಣಬಹುದು. ಮೌರ್ಯರ ಕಂದಾಯ ಪದ್ಧತಿಯನ್ನು ಶಾತವಾಹನರು ಕೆಲ ಮಟ್ಟಿಗೆ ಮುಂದುವರೆಸಿದರೂ ಸಹ, ಇವರ ಕಾಲದಲ್ಲಿ ಭೂಮಾಪನ, ಮತ್ತು ಭೂಮಿಯನ್ನು ಖುಷ್ಕಿ, ತರಿ, ಬಾಗಾಯತು ಎಂದು ವರ್ಗೀಕರಣ ಮಾಡಿ, ಮಣ್ಣಿನ ಸ್ವರೂಪ, ನೀರಾವರಿ ಸೌಲಭ್ಯ ಮತ್ತು ಬೆಳೆ ಆಧರಿಸಿ ಭೂ ಕಂದಾಯ ನಿಗಧಿ ಮಾಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಭೂಮಿಯನ್ನು ಸಂಪೂರ್ಣ ಅಳತೆ ಮಾಡಿ ಕಂದಾಯ ನಿಗದಿ ಮಾಡುವುದಕ್ಕಾಗಿ ರಜ್ಜುಕ. (ಅಳತೆಯ ಹಗ್ಗ ಹಿಡಿಯುವವನು) ಎಂಬ ಅಧಿಕಾರಿ ಇದ್ದನು ಎಂದು ಶಾಸನಗಳಿಂದ ತಿಳಿದು ಬರುವುದು.

ರಾಷ್ಟ್ರಕೂಟರ ಆಡಳಿತ ವ್ಯವಸ್ಥೆಯಲ್ಲಿ ಅಂದರೆ ೮ ರಿಂದ ೧೦ನೇ ಶತಮಾನದಲ್ಲಿ ಕಂದಾಯ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಕಾಣಬಹುದು. ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಪ್ರಜೆಗಳು ಸಂಪೂರ್ಣವಾಗಿ ಎಲ್ಲದಕ್ಕೂ ಅರಸರ ಮೇಲೆ ಅವಲಂಬಿಸಿರಲಿಲ್ಲ. ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಗ್ರಾಮ ಮಟ್ಟದಲ್ಲಿ ರಚನೆಗೊಂಡಿದ್ದವು. ರಾಜರು ಪ್ರಜೆಗಳಿಗೆ ಆಂತರಿಕವಾಗಿ ಸಾಮಾಜಿಕ ರಕ್ಷಣೆಯನ್ನು ಮತ್ತು ಹೊರಗಿನ ಶತ್ರುಗಳಿಂದ ರಕ್ಷಿಸುವ ಹೊಣೆಯನ್ನು ಹೊತ್ತಿದ್ದರೆ ಅದಕ್ಕೆ ಪ್ರತಿಯಾಗಿ ಪ್ರಜೆಗಳು ರಾಜರಿಗೆ ಭೂಕಂದಾಯ ರೂಪದಲ್ಲಿ ತೆರಿಗೆಯನ್ನು ನೀಡುತ್ತಿದ್ದರು. ಈ ಕಾಲದಲ್ಲಿ ಸಾಮಾನ್ಯವಾಗಿ ಭೂಮಿಯ ಉತ್ಪನ್ನದ ಆರನೇ ಒಂದು ಭಾಗದಷ್ಟನ್ನು ಭೂಕಂದಾಯ ರೂಪದಲ್ಲಿ ವಸೂಲು ಮಾಡಲಾಗುತ್ತಿತ್ತು. ಭೂಕಂದಾಯವಲ್ಲದೇ ಸ್ಥಳೀಯವಾಗಿ ಅನೇಕ ವಿಧದ ತೆರಿಗೆಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೆಲವು ನಿರ್ದಿಷ್ಟ ಉದ್ದೇಶಗಳಿಗೆ ಅಂದರೆ ಕೆರೆಗಳ, ದೇವಾಲಯಗಳ ಅನ್ನ ಛತ್ರಗಳ, ಅರವಟ್ಟಿಗೆಗಳ ನಿರ್ವಹಣೆ, ವಿದ್ಯಾಸಂಸ್ಥೆಗಳನ್ನು ಪಡೆಸುವುದು ಮುಂತಾದವುಗಳು. ತೆರಿಗೆಯನ್ನು ಸ್ಥಳೀಯ ಆಡಳಿತ ಸಂಸ್ಥೆಯವರು ಮತ್ತು ಕೇಂದ್ರ ಆಡಳಿತ ವ್ಯವಸ್ಥೆಯವರೂ ಪ್ರತ್ಯೇಕವಾಗಿ ಆಕರಣೆ ಮಾಡುತ್ತಿದ್ದರು. ವೃತ್ತಿ ತೆರಿಗೆಯೂ ರೂಢಿಯಲ್ಲಿ ಇತ್ತು. ಕಂದಾಯ ವಿಚಾರದಲ್ಲಿ ವಿಜಯನಗರ ಸಾಮ್ರಾಜ್ಯ ಮನುವಿನ ಹೇಳಿಕೆಗಳನ್ನೇ ಮನ್ನಿಸುತ್ತಿತ್ತೆಂದು ಆ ಕಾಲದ ಪರಾಶರ ಮಾಧವಿಯಿಂದ ತಿಳಿದು ಬರುವುದು.

ಮುಸ್ಲೀಮ ಸುಲ್ತಾನರ ಆಡಳಿತ ವ್ಯವಸ್ಥೆಯಲ್ಲಿ ಈ ಪದ್ಧತಿ ಮುಂದುವರೆದು ಭೂ ಕಂದಾಯವನ್ನು ಖರಜ್ (ಕಪ್ಪ) ಎಂದು ಲೆಕ್ಕ ಹಾಕುತ್ತಿದ್ದರು. ಅದನ್ನು ಹೊಲದಲ್ಲಿಯೇ ಕೊಡಬೇಕಾಗುತ್ತಿತ್ತು. ಇವರ ಕಾಲದಲ್ಲಿ ಭೂ ಹಿಡುವಳಿದಾರರು ನೀಡುತ್ತಿದ್ದ ಕಂದಾಯವನ್ನು ಹೆಚ್ಚಿಸಲಾಯಿತು. ಕಂದಾಯ ವಸೂಲಿಯ ಕ್ರಮದಲ್ಲಿ ಅನೇಕ ಮಾರ್ಪಾಡುಗಳನ್ನು ತರಲಾಯಿತಲ್ಲದೇ ಕಂದಾಯ.ದ ಕೆಲವು ಭಾಗ ಅಥವಾ ಸಂಪೂರ್ಣ ಕಂದಾಯವನ್ನು ನಗದು ರೂಪದಲ್ಲಿ ವಸೂಲು ಮಾಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ತೈಮೂರ ಮತ್ತು ಶೇರಶಹಾ ಸುಲ್ತಾನರ ಕಾಲದಲ್ಲಿ ಈ ಬಗ್ಗೆ ಅನೇಕ ಸುಧಾರಣೆಗಳನ್ನು ತರಲಾಯಿತು. ಈ ಬಗ್ಗೆ ಹೆಚ್ಚು ಮಹತ್ವ ಪೂರ್ಣವಾದ ಬದಲಾವಣೆಗಳನ್ನು ಅಕಬರನ ಕಾಲದಲ್ಲಿ ತೋದರ ಮಲ್ಲನು ಜಾರಿಗೆ ತಂದನು. ಆದ್ದರಿಂದ ಈ ಹೊಸ ವ್ಯವಸ್ಥೆಯನ್ನು ಆತನ ಹೆಸರಿನಿಂದ ಕರೆಯಲಾಯಿತು. ಮೊಘಲರ ಕಾಲದಲ್ಲಿ ಕಂದಾಯ ವಸೂಲಿ ಮತ್ತು ನಿರ್ವಹಣೆಗಾಗಿ ಸರ್ಕಾರ ಜಿಲ್ಲೆಗಳ ಅಧೀನದಲ್ಲಿ ಅಮಾನಿ (ತಾತ್ಕಾಲಿಕ) ಅಧಿಕಾರಿಗಳನ್ನು ನೇಮಿಸಲಾಯಿತು. ಅದರಂತೆ ದೇಶಮುಖ, ದೇಶ, ಕುಲಕರ್ಣಿ ಮತ್ತು ಸರ್‌ನಾಡಗೌಡ ಹುದ್ದೆಗಳನ್ನು ಸೇರಿಸಿ ಒಂದೇ ಹುದ್ದೆಯನ್ನು ಮಾಡಲಾಯಿತು. ದೇಶಪಾಂಡೆ, ಮುಜುಮದಾರ, ಕಾನುಂಗೋ ಮತ್ತು ಕುಲಕರ್ಣಿ ಹುದ್ದೆಗಳನ್ನು ಹಿಂದಿನ ಸ್ವರೂಪದಲ್ಲಿ ಮುಂದುವರೆಸಲಾಯಿತು. ಮೊಗಲ ಅರಸರ ಕಾಲದಲ್ಲಿ ಕಂದಾಯ ವ್ಯವಸ್ಥೆಯಲ್ಲಿ ಭೂಮಿಯನ್ನು ಸರಿಯಾಗಿ ಅಳತೆ ಮಾಡುವುದಲ್ಲದೇ ಫಲವತ್ತತೆಯ ಆಧಾರದ ಮೇಲೆ ಭೂಮಿಯನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿ ಭೂಕಂದಾಯ ವಿಧಿಸುವ ವ್ಯವಸ್ಥೆಯನ್ನು ರೂಢಿಯಲ್ಲಿ ತರಲಾಯಿತು.

ಸಾಮಾನ್ಯವಾಗಿ ಭೂಮಿಯ ಉತ್ಪಾದನೆಯ ಮೂರನೆಯ ಒಂದು ಭಾಗವನ್ನು ಕಂದಾಯ ರೂಪದಲ್ಲಿ (ನಗದು), ವಸೂಲು ಮಾಡಲಾಗುತ್ತಿತ್ತು. ಆದರೆ ಈ ಕಂದಾಯವನ್ನು ಹಿಂದಿನ ೧೯ ವರ್ಷಗಳ, ಭೂ ಉತ್ಪನ್ನದ ಸರಾಸರಿಯನ್ನು

ಆಧರಿಸಿ ನಿರ್ಧರಿಸಲಾಗುತ್ತಿತ್ತು. ಇದಕ್ಕೂ ಮೊದಲಿನ ವ್ಯವಸ್ಥೆಯಲ್ಲಿ ಕೇವಲ ಒಂದು ವರ್ಷದ ಭೂ ಉತ್ಪನ್ನದ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಹೊಸ ವ್ಯವಸ್ಥೆಯಲ್ಲಿ ಕೆಲವೊಂದು ಆಡಳಿತಾತ್ಮಕ ತೊಂದರೆಗಳು ಕಂಡು ಬಂದರಿಂದ ೧೯ ವರ್ಷದ ದೀರ್ಘ ಅವಧಿಯನ್ನು ೧೦ ವರ್ಷಗಳಿಗೆ ಇಳಿಸಲಾಯಿತು. ಈ ವ್ಯವಸ್ಥೆಯು ಭೂ ಮಾಲೀಕರು ಮತ್ತು ಸರ್ಕಾರದ ಮಧ್ಯದಲ್ಲಿ ಭೂಕಂದಾಯವನ್ನು ಸಂಗ್ರಹಿಸುವಲ್ಲಿ ನೆರವಾಗಲು ಹಲವಾರು ಮಧ್ಯವರ್ತಿ ಅಧಿಕಾರಿಗಳನ್ನು ನೇಮಿಸಲಾಯಿತು. ಆ ಪೈಕಿ ಜಮೀನದಾರಿ ಪದ್ಧತಿಯು ಒಂದು. ಇದು ಸ್ವಾತಂತ್ರ್ಯ ಪೂರ್ವದಲ್ಲಿ ಭಾರತಿಯ ಸಮಾಜ ವ್ಯವಸ್ಥೆಗೆ ಮುಸ್ಲೀಮ ಅರಸರು, ನಂತರ ಬ್ರಿಟೀಷರು ನೀಡಿದ ಕೊಡುಗೆಯಾಗಿತ್ತು. ಮೊಗಲರ ಕಾಲದಲ್ಲಿ ತುಂಬಾ ವ್ಯಾಪಕವಾಗಿದ್ದ ತೋದರಮಲ್ ಕಂದಾಯ ವ್ಯವಸ್ಥೆಯು ಚಿಕ್ಕಪುಟ್ಟ ಬದಲಾವಣೆಗಳೊಂದಿಗೆ ಸುಮಾರು ನೂರು ವರ್ಷಗಳ ಕಾಲ ಮುಂದುವರೆಯಿತು. ಆದರೆ ಮೊಘಲರ ಅವಸಾನದ ನಂತರ ಕೇಂದ್ರಿಯ. ಸರ್ಕಾರ ದುರ್ಬಲಗೊಂಡು ಪ್ರಾಂತೀಯ. ಸರ್ಕಾರಗಳು ಸಬಲಗೊಂಡಂತೆ ಹೊಸ ಹೊಸ ಬದಲಾವಣೆಗಳನ್ನು ತರಲಾಯಿತು.

ಹೈದರಾಬಾದ್ ಕರ್ನಾಟಕದಲ್ಲಿ ಪ್ರಚಲಿತವಿದ್ದ ಕಂದಾಯ ನಿಗದಿಗೊಳಿಸುವ ವ್ಯವಸ್ಥೆಯು ತೋದರಮಲ್ಲನ ಮುಂದುವರೆದ ವ್ಯವಸ್ಥೆಯಾಗಿತ್ತು. ಅದರ ಅನ್ವಯ ನಿಗಧಿತ ಭೂಮಿಯಲ್ಲಿ ಬಿತ್ತನೆಗೆ ಉಪಯೋಗಿಸುವ ಬೀಜದ ಪ್ರಮಾಣ ಅಥವಾ ಭೂಮಿಯ ಉತ್ಪಾದನೆಯ ಆಧಾರದ ಮೇಲೆ ಭೂಕಂದಾಯ ನಿಗದಿ ಮಾಡಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ ಒಣ ಬೇಸಾಯದ ಭೂಮಿಯಾದಲ್ಲಿ ಉತ್ಪಾದನೆಯ ನಾಲ್ಕನೆಯ ಒಂದು ಭಾಗ, ನೀರಾವರಿಗೆ ಒಳಪಟ್ಟ ಜಮೀನು ಆಗಿದ್ದರೆ ಒಟ್ಟು ಉತ್ಪಾದನೆಯಲ್ಲಿ ಅರ್ಧದಿಂದ ಐದನೆಯ ಎರಡು ಭಾಗದಷ್ಟು ಪ್ರಮಾಣದಲ್ಲಿ ಕಂದಾಯ ವಸೂಲು ಮಾಡಲಾಗುತ್ತಿತ್ತು. ವಸ್ತು ರೂಪದಲ್ಲಿ (ಧಾನ್ಯ) ನಿಗದಿಗೊಳಿಸಿದ ಕಂದಾಯವನ್ನು ಹಣದ (ನಗದು) ರೂಪದಲ್ಲಿ ವಸೂಲು ಮಾಡಿದಾಗ ಅದು ಆಯಾ ಜಮೀನಿನ ನಿಗದಿತ ಕಂದಾಯವಾಗುತ್ತಿತ್ತು. ಭೂಕಂದಾಯವನ್ನು ಗುತ್ತಿಗೆದಾರರ ಮೂಲಕ ಅಥವಾ ಕಂದಾಯ ಇಲಾಖೆಯ ಮೂಲಕ ವಸೂಲು ಮಾಡಲಾಗುತ್ತಿತ್ತು. ಇಲಾಖೆಯ ಮೂಲಕ ಕಂದಾಯವನ್ನು ತಾಲೂಕುದಾರ ಅಥವಾ ನಾಯಬಿ ಎಂಬ ಅಧಿಕಾರಿ ಮೂಲಕ ವಸೂಲು ಮಾಡಲಾಗುತ್ತಿತ್ತು.

## ಭೂ ಮಾಪನ

ಭೂಮಾಪನ ಮೂಲ ಮಾನ (ಘಟಕ)ವನ್ನು ಕುರಿತಂತೆ ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ವೈವಿಧ್ಯಮಯ ಅಳತೆಯ ಮಾಪನಗಳನ್ನು ಶಾಸನಗಳಲ್ಲಿ ಕಾಣಬಹುದು. ಪ್ರಾಚೀನ ಕಾಲದಲ್ಲಿ ನಿವರ್ತನ, ಮತ್ತರ ಮತ್ತು ಕಮ್ಮರೂಡಿಯಲ್ಲಿ ಇದ್ದವು. ಈ ಜಿಲ್ಲೆಯ ಬಹುಪಾಲು ಶಾಸನಗಳಲ್ಲಿ ಭೂಮಿಯ ಅಳತೆಯನ್ನು ಮತ್ತರ ಎಂಬ ಮೂಲಮಾನದಿಂದ ಸೂಚಿಸಲಾಗಿದೆ.

ಬಹುಮನಿ ಅರಸರು ಮತ್ತು ನಂತರ ಮೊಘಲ ಅರಸರ ಕಾಲದಲ್ಲಿ ಭೂಮಿಯ ಅಳತೆಯನ್ನು ಕೂರಿಗೆ ಎಂಬ ಅಳತೆಯ ಮೂಲ ಮಾನದಿಂದ ಅಳೆಯುತ್ತಿದ್ದರು. (ಕೂರಿಗೆ ಎನ್ನುವುದು ಬಿತ್ತನೆಗೆ ಉಪಯೋಗಿಸುವ ವ್ಯವಸಾಯದ ಉಪಕರಣವೂ ಹೌದು) ಒಂದು ಕೂರಿಗೆ ಅಂದಾಜು ನಾಲ್ಕು ಎಕರೆಗೆ ಸಮನಾಗಿರುತ್ತಿತ್ತು.

ಒಂದು ಕೂರಿಗೆ ವ್ಯಾಪ್ತಿಯ ಜಮೀನನ್ನು ಈ ರೀತಿಯಲ್ಲಿ ವಿವರಿಸಬಹುದಾಗಿತ್ತು. ಒಂದುದಿನದಲ್ಲಿ ಮೂರು ಜನರು, ಆರು ಎತ್ತುಗಳ (ಮೂರು ಕೂರಿಗೆ) ಸಹಾಯದಿಂದ ಮೂರು ಸೇರು ಜೋಳದ ಬೀಜವನ್ನು ಬಿತ್ತುವ ವಿಸ್ತೀರ್ಣದ ಪ್ರದೇಶ. ಭೂಕಂದಾಯವನ್ನು ಭೂಮಿಯ ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ನಾಲ್ಕು ವಿಧವಾಗಿ ನಿರ್ಧರಿಸಲಾಗುತ್ತಿತ್ತು. ಅವುಗಳೆಂದರೆ (೧) ರೇಗಾರ (ಕಪ್ಪು ರೇವೆ ಮಣ್ಣಿನ ಭೂಮಿ (೨) ಮಿಲವಾ (ಕಪ್ಪು ಮತ್ತು ಕೆಂಪು ಮಿಶ್ರಿತ) (೩) ಮಸಾರಿ ಕೆಂಪು ಮಣ್ಣು) (೪) ಶೋರೆ ಸವಲು (ಅಲ್ಕಲೀನ) ಅಂದಿನ ಕಾಲದಲ್ಲಿ ಒಂದು ಕೂರಿಗೆ ಮೊದಲನೆ ದರ್ಜೆಯ ಭೂಮಿಗೆ ಕಂದಾಯ ಐದು ರೂಪಾಯಿಂದ ಹತ್ತು ರೂವರೆಗೆ ಆಗಿದ್ದರೆ, ಎರಡನೆ ದರ್ಜೆಗೆ ರೂ ಮೂರರಿಂದ ಎಂಟು ರೂ. ವರೆಗೆ ಮೂರನೆ ದರ್ಜೆಗೆ ಒಂದು ರೂಪಾಯಿಯಿಂದ ಐದು ರೂಪಾಯಿ ಮತ್ತು ನಾಲ್ಕನೆ ದರ್ಜೆಯ ಭೂಮಿಗೆ ೮ ಅಣೆಯಿಂದ ಎರಡು ರೂಪಾಯಿವರೆಗೆ ಎಂದು ನಿಗದಿಪಡಿಸಲಾಗತ್ತಿತ್ತು. ನೀರಾವರಿ ಜಮೀನಿಗೆ ಸಂಬಂಧಪಟ್ಟಂತೆ ನೀರಿನ ಲಭ್ಯತೆಯ ಅನುಸಾರ ಒಂದು ಕೂರಿಗೆಗೆ ರೂ. ೨ ರಿಂದ ೧೫೦ ವರೆಗೆ ಕಂದಾಯವನ್ನು ಗೊತ್ತುಪಡಿಸಲಾಗುತ್ತಿತ್ತು. ಕಬ್ಬು, ಭತ್ತ ಬೆಳೆಯುವ ಭೂಮಿಯ ಕಂದಾಯದ ದರ ಸಾಮಾನ್ಯ ಕಂದಾಯಕ್ಕಿಂತ ಶೇಕಡಾ ೫೦ ರಷ್ಟು ಹೆಚ್ಚು ಇರುತ್ತಿತ್ತು.

ನೀರು ಪೂರೈಕೆಯ ವಿಧಾನವನ್ನು ಅನುಸರಿಸಿ ಭಾವಿಯ ನೀರಿನಿಂದ ಬೆಳೆಯುವ ಭತ್ತದ ಹಾಗೂ ಭಾಗಾಯತ ಜಮೀನುಗಳ ಕಂದಾಯ ನಿಗದಿಯಾಗುತ್ತಿದ್ದು ಇದು ಪ್ರತಿ ಕೂರಿಗೆಗೆ ರೂ. ೧೦ ರಿಂದ ೨೫ರವರೆಗೆ ಇರುತ್ತಿತ್ತು. ಭತದ ಗದ್ದೆಗಳಿಂದ ಕಂದಾಯವನ್ನು ವಸ್ತು ರೂಪದಲ್ಲಿ (ಭತ್ತ) ಸಂಗ್ರಹ ಮಾಡಿದರೆ ಒಣಭೂಮಿಯ ಕಂದಾಯವನ್ನು ನಗದು ರೂಪದಲ್ಲಿ ವಸೂಲು ಮಾಡಲಾಗುತ್ತಿತ್ತು. ವಸ್ತು ರೂಪದಲ್ಲಿ ಸಂಗ್ರಹವಾಗುವ ಕಂದಾಯಕ್ಕೆ 'ಬಟಾಯಿ' ಎಂದು ಕರೆಯಲಾಗುತ್ತಿತ್ತು. ಸುಗ್ಗಿಯ ನಂತರ ಸರಕಾರಕ್ಕೆ ಸೇರಬೇಕಾದ ಕಂದಾಯದ ಭಾಗವನ್ನು ನಿರ್ಧರಿಸಿ ಅದನ್ನು ಹರಾಜು ಮೂಲಕ ಮಾರಾಟ ಮಾಡಲಾಗುತ್ತಿತ್ತು. ಕಂದಾಯವನ್ನು ನಾಲ್ಕು ಕಂತುಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ಭೂಮಿಯ ಮಾಲೀಕರು ಸುಗ್ಗಿಯ ಸಮಯದಲ್ಲಿ ಮುಂದಿನ ಬೆಳೆಯನ್ನು ಬೆಳೆಯಲು ಭೂಮಿಯನ್ನು ಸಾಗುವಳಿ ಮಾಡುವುದಾಗಿ ಬರವಣಿಗೆಯಲ್ಲಿ ಒಪ್ಪಂದ ಮಾಡಿ ಕೊಟ್ಟ ನಂತರ ಮತ್ತು ಸೂಕ್ತ ಜಾಮೀನು ಒದಗಿಸಿದ ನಂತರವೇ ಅಧಿಕಾರಿಗಳು ಮಾಗಿದ ಬೆಳೆಯನ್ನು ಕಟಾವು ಮಾಡಲು ಅನುಮತಿ ಕೊಡುತ್ತಿದ್ದರು. ಈ ಮೇಲಿನ ವ್ಯವಸ್ಥೆಯು ಈ ಪ್ರದೇಶವು 'ಅಸಫಜಾಹಿ' ಆಡಳಿತಕ್ಕೆ ಒಳಪಡುವ ಪೂರ್ವದಲ್ಲಿ ಇತ್ತು ಎಂದು ತಿಳಿದು ಬರುವುದು.

**ಸಾಲಾರ ಜಂಗರ ಸುಧಾರಣೆಗಳು**

೧೮೫೩ ಮತ್ತು ನಂತರದ ವರ್ಷಗಳಲ್ಲಿ ಈ ವಿಷಯವಾಗಿ ಸಾಕಷ್ಟು ಪ್ರಗತಿಪರ ಬದಲಾವಣೆಗಳನ್ನು ಜಾರಿಯಲ್ಲಿ ತರಲಾಯಿತು. ಮೊದಲನೆಯದಾಗಿ ಹಳೆಯ ಹೈದರಾಬಾದ್ ಪ್ರದೇಶದಲ್ಲಿ ಭೂಮಿಯ ಅಳತೆಯ ಮೂಲ ಮಾಪನವನ್ನು ಕೂರಿಗೆಯಿಂದ ಎಕರೆಗೆ ಬದಲಾಯಿಸಲಾಯಿತು. ಸಾಗುವಳಿಗೆ ಯೋಗ್ಯವಲ್ಲದ ಭೂಮಿಯನ್ನು ಕಂದಾಯ ನಿಗದಿಯಿಂದ ಹೊರತು ಪಡಿಸಲಾಯಿತು. ಭೂಮಿಯ ಚೆಕ್‌ಬಂದಿಗಳನ್ನು (ಗಡಿಗಳನ್ನು) ಗೊತ್ತುಪಡಿಸಲಾಯಿತು ಮತ್ತು ಅವುಗಳಿಗೆ ಸರ್ವೆ ನಂಬರುಗಳನ್ನು ಕೊಡಲಾಯಿತು. ಭೂಕಂದಾಯವನ್ನು ಭೂಮಿಯ ಮಣ್ಣಿನ ಫಲವತ್ತತೆಯ ಅನುಸಾರ ನಿರ್ಧರಿಸಲಾಯಿತು. ಕಂದಾಯ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಲಾಯಿತು. ರೈತರಿಗೆ ಅವರ ಹಿಡುವಳಿಗಳ ಮೇಲೆ ಒಡೆತನದ ಸ್ವಾಧೀನತೆಯ ಹಕ್ಕನ್ನು ನೀಡಲಾಯಿತು. ವಾರ್ಷಿಕ ಜಮಾ ಬಂದಿಯನ್ನು ಪ್ರಾರಂಭಿಸಲಾಯಿತು. ರೈತರ ಹಿತಸಾಧನೆಯಲ್ಲಿ ಈ ಸುಧಾರಣೆಗಳು ಬಹು ಮಹತ್ವ ಪೂರ್ಣವಾದವುಗಳಾಗಿದ್ದವು. ಪ್ರತಿ ಒಬ್ಬ ಭೂಮಾಲೀಕನಿಗೆ ಪಾವತಿಬುಕ್ ಎಂಬ ಕಂದಾಯದ ಭೂಮಿಯ ಮಹತ್ವದ ವಿವರ ಸೂಚಿಸುವ ಪುಸ್ತಕವನ್ನು ನೀಡಲಾಯಿತು. ಭೂಕಂದಾಯವನ್ನು ಪಾವತಿ ಮಾಡಿದಾಗ ಅದರ ವಿವರಗಳನ್ನು ಪಾವತಿ ಪುಸ್ತಕದಲ್ಲಿ ನಮೂದಿಸಲಾಗುತ್ತಿತ್ತು.

ಹಾಳುಬಿದ್ದ ಭೂಮಿಯ ಸಾಗುವಳಿಯನ್ನು ಕುರಿತಂತೆ ಅನೇಕ ನಿಯಮಾವಳಿಗಳನ್ನು ರೂಪಿಸಲಾಯಿತು. ಪಾಳುಬಿದ್ದ ಭೂಮಿಯನ್ನು ಸಾಗುವಳಿಗೆ ನೀಡಿದಲ್ಲಿ ಸಾಗುವಳಿದಾರನು ಮೊದಲನೇ ವರ್ಷ ಭೂಕಂದಾಯವನ್ನು ಕೊಡಬೇಕಾಗಿರಲಿಲ್ಲ, ಎರಡನೇ ವರ್ಷ ಪ್ರತಿ ಎಕರೆಗೆ ರೂಪಾಯಿಯ ಎಂಟನೆಯ ಒಂದುಭಾಗವನ್ನು, ಮೂರನೇ ವರ್ಷದಲ್ಲಿ ರೂಪಾಯಿ ದರದಲ್ಲಿ ಕಾಲು ಭಾಗವನ್ನು, ನಾಲ್ಕನೇ ವರ್ಷದಲ್ಲಿ, ಅರ್ದ ರೂಪಾಯಿಯನ್ನು ಐದನೆಯ ವರ್ಷದಲ್ಲಿ ಮತ್ತು ನಂತರದ ವರ್ಷಗಳಲ್ಲಿ ನಿಗದಿ ಪಡಿಸಿದ ಪೂರ್ತಿ ಹಣವನ್ನು ಸಂದಾಯ ಮಾಡಬೇಕಾಗುತ್ತಿತ್ತು. ಭೂಕಂದಾಯವನ್ನು ಬೆಳೆಗೆ ಅನುಗುಣವಾಗಿ ಮೂರು ಕಂತುಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ಒಣಭೂಮಿಯ 'ಖರೀಫ್' ಬೆಳೆಗೆ (ಮುಂಗಾರು) ಒಂದು ರೂಪಾಯಿ ಕಂದಾಯದ ಪೈಕಿ ನವೆಂಬರ್‌ನಲ್ಲಿ ಎರಡು ಆಣೆ, ಡಿಸೆಂಬರ್ ನಲ್ಲಿ ಆರು ಆಣೆ, ಜನವರಿಯಲ್ಲಿ ಎಂಟು ಆಣೆ ಪ್ರಮಾಣದಂತೆ ವಸೂಲಿ ಮಾಡಲಾಗುತ್ತಿತ್ತು. ಹಿಂಗಾರಿ ಬೆಳೆ (ರಾಭಿ) ಗೆ ಜನವರಿಯಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಭೂತೆರಿಗೆಯನ್ನು ವಸೂಲಿ ಮಾಡಲಾಗುತ್ತಿತ್ತು. ಈ ಸುಧಾರಣೆಗಳು ಜಾರಿಯಲ್ಲಿ ಇರುವಾಗಲೇ ಗ್ರಾಮದ ಪಟೇಲ ಮತ್ತು ಪಟವಾರಿ (ಕುಲಕರ್ಣಿ) ಯವರಿಗೆ ಸಾಗುವಳಿದಾರರು ಬಲುತಾ ಕೊಡುವದನ್ನು ತೆಗೆದು ಹಾಕಲಾಯಿತು. ಬಲೂತಾ ಬದಲಿಗೆ ನಿಗಧಿತ ಆಯವನ್ನು ಗೊತ್ತು ಮಾಡಲಾಯಿತು. (ಆಯಪಟ್ಟಿ) ಆಯವನ್ನು ಹಣದ ರೂಪದಲ್ಲಿ ಒಂದು ರೂಪಾಯಿ ಭೂಕಂದಾಯಕ್ಕೆ ಒಂದು ಆಣೆಯಂತೆ ವಸೂಲಿ ಮಾಡಲಾಗುತ್ತಿತ್ತು. ಇದೇ ಸಮಯದಲ್ಲಿ ಪಟೇಲ ಮತ್ತು ಪಟವಾರಿ ವಸೂಲಿ ಮಾಡಲಾಗುತ್ತಿತ್ತು. ಇದೇ ಸಮಯದಲ್ಲಿ ಪಟೇಲ ಮತ್ತು ಪಟವಾರಿ ಯವರ ಸೇವೆಗೆ ನೀಡಿದ್ದ ಇನಾಮ ಜಮೀನನ್ನು ಸರ್ಕಾರ ಹಿಂದಕ್ಕೆ ಪಡೆಯಿತು.

## ಜಿಲ್ಲಾ ಬಂದಿ ವ್ಯವಸ್ಥೆ

೧೯೦೫ರಲ್ಲಿ ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟ್ ಆಗಿದ್ದ ಅಬ್ದುಲ್ ರಹಮಾನ್ ಅವರಿಂದ ಈ ಯೋಜನೆಯು ಪ್ರಾರಂಭವಾಯಿತು. ಇದೂ ಸಹ ೧೮೫೩ ಮತ್ತು ೧೮೮೩ರ ಮಧ್ಯದಲ್ಲಿ ಹೈದರಾಬಾದ್ ಸರ್ಕಾರದ ಮುಖ್ಯ ಮಂತ್ರಿಯಾಗಿದ್ದ ನವಾಬ ಸರ್ ಸಾಲಾರ ಜಂಗ್ ಅವರು ಪ್ರಾರಂಭಗೊಳಿಸಿದ್ದ ಕಂದಾಯ ಸುಧಾರಣೆಯು ಮುಂದುವರೆದ ಯೋಜನೆಯಾಗಿತ್ತು ಕಂದಾಯ ಪದ್ಧತಿಯನ್ನು ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ, ಸುಧಾರಿಸುವಲ್ಲಿ ಇದು ಒಂದು ದಿಟ್ಟ ಹೆಜ್ಜೆಯಾಗಿತ್ತು. ಈ ಸುಧಾರಣೆಗಳ ಮುಖ್ಯ ಉದ್ದೇಶ ಭೂಮಿ ಮತ್ತು ಭೂಕಂದಾಯ ವಸೂಲಿಯನ್ನು ಉತ್ತಮಗೊಳಿಸುವುದು ಮತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಭದ್ರ ಗೊಳಿಸುವುದಾಗಿತ್ತು. ಈ ಯೋಜನೆಯ ಅನ್ವಯ ವ್ಯವಸಾಯ ಯೋಗ್ಯ ಭೂಮಿಯನ್ನು ಅಳೆದು, ಗುರುತಿಸಿ,ನೊಂದಾಯಿಸಲಾಯಿತು. ಭೂಕಂದಾಯವನ್ನು ಒಂದು ಬೀಘಾ ಜಮೀನಿಗೆ ನಿಗಧಿಗೊಳಿಸಲಾಯಿತು. ಒಂದು ಬೀಘಾ ಅಳತೆ ೩.೦೦೦ ಚ. ಗಜಕ್ಕೆ ಸಮನಾಗಿತ್ತು. ಪ್ರತಿ ಭೂಮಾಲೀಕನಿಗೂ ಸಾಗುವಳಿ ದಾರನಿಗೆ ಹಾಗೂ ಮಾಲೀಕತ್ವದ ಹಕ್ಕನ್ನು ನೀಡಲಾಯಿತು. ಅಲ್ಲದೇ ಮೂರು ವರ್ಷಗಳ ಒಪ್ಪಂದ (ಕೌಲನ್ನು) ಸಹ ಮಂಜೂರು ಮಾಡಲಾಯಿತು. ಹಿಂದಿನ ಹತ್ತು ವರ್ಷಗಳ ಸರಾಸರಿ ಆಧಾರದ ಮೇಲೆ ವಾರ್ಷಿಕ ಭೂಕಂದಾಯ ನಿಗಧಿ ಗೊಳಿಸಲಾಯಿತು. ಜಿಲ್ಲಾ ಬಂದಿ ಸುಧಾರಣೆಗಳ ಅನ್ವಯ ಭೂ ಕಂದಾಯವನ್ನು ವಿವಿಧ ಐದು ಬಗೆಯ ಜಮೀನುಗಳಿಂದ ಅಂದರೆ ರೈತವಾರಿ (ಗ್ರಾಮಗಳಿಂದ), ಗುತ್ತಿಗೆ ಭೂಮಿಯಿಂದ ಪೈಶಶಾಪ, ಪಾನ ಮುಖ್ತಾ ಭೂಮಿಗಳಿಂದ, ಹಣ್ಣಿನ ಗಿಡಗಳಿಂದ ಮುಂತಾದವುಗಳಿಂದ ಆಕರಣೆ ಮಾಡಲಾಗುತ್ತಿತ್ತು. ಭೂಕಂದಾಯವನ್ನು ಭೂಮಿಯ ವೈವಿದ್ಯತೆಗೆ ಅನುಸಾರ ಅಂದರೆ ಒಣಭೂಮಿ (ಖುಷ್ಕಿ) ನೀರಾವರಿ ಮತ್ತು ಬೆಳೆಭೂಮಿ ಪ್ರಕಾರ ಬದಲಾವಣೆ ಹೊಂದುತ್ತಿತ್ತು. ಭೂಮಿಯನ್ನು ಕಾಣಿಕೆಯಾಗಿ (ಇನಾಮ) ಕೊಡುವ ವ್ಯವಸ್ಥೆಯು ಜಾರಿಯಲ್ಲಿ ಇತ್ತು.

### ಇನಾಮುಗಳು

ಭೂಮಿಯನ್ನು ಇನಾಮು ರೂಪದಲ್ಲಿ ನೀಡುವ ಸಂಪ್ರದಾಯವು ರೂಢಿಯಲ್ಲಿ ಇರುವುದು ಪ್ರಾಚೀನ ಕಾಲದಿಂದಲೂ ನಾಡಿಗೆ ಅಥವಾ ಗ್ರಾಮೀಣ ಸಮುದಾಯಕ್ಕೆ ಅಪೂರ್ವ ಸೇವೆ ಸಲ್ಲಿಸಿದವರಿಗೆ, ಸರ್ಕಾರ ಸ್ಥಳೀಯ ಸಂಸ್ಥೆಗಳು ಜಮೀನು ಮಂಜೂರು ಮಾಡುತ್ತಿದ್ದವು. ಧಾರ್ಮಿಕ ಸೇವೆಗಳಿಗೆ ಮತ್ತು ಸಮಾಜ ಸೇವೆಗಳಿಗೂ ಜಮೀನು ಮಂಜೂರು ಮಾಡಲಾಗುತ್ತಿತ್ತು.

ಜಹಗೀರು ನೀಡುವ ಪದ್ಧತಿಯು ಮೊಗಲರ ಕಾಲದಲ್ಲಿ ಪ್ರಾರಂಭವಾಯಿತು. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಜೆಗಳ ವಿಶಿಷ್ಟ ಸೇವೆಗಾಗಿ ಅಥವಾ ಜಹಗೀರು ಪಡೆಯುವವನ ಸ್ಥಾನಮಾನ, ಗೌರವಗಳನ್ನು ಕಾಯ್ದುಕೊಳ್ಳಲು ಒಂದು ಅಥವಾ ಹೆಚ್ಚು ಗ್ರಾಮಗಳನ್ನು ಮುಖ್ಯ ಕೊಡುಗೆಯಾಗಿ ಅಥವಾ ಜೋಡಿ (ನಾಮಮಾತ್ರ) ಕಂದಾಯ ಕೊಡುವ ಕರಾರಿನ ಮೇಲೆ ಜಹಗೀರು ನೀಡಲಾಗುತ್ತಿತ್ತು. ಔರಂಗಜೇಬನ ಮರಣಾನಂತರ ರಾಜ್ಯದಲ್ಲಿ ಉಂಟಾದ ಅಶಾಂತಿ ಮತ್ತು ಕ್ಷೋಬೆಯನ್ನು ಉಪಶಮನಗೊಳಿಸಲು ಒಂದನೆಯ ಅಸಫ್ ಜಾ ಅನೇಕ ಸುಧಾರಣೆಗಳನ್ನು ಪ್ರಾರಂಭಿಸಿದನು. ಆ ಪೈಕಿ ಇದೂ ಒಂದು. ಅಸಫ್ ಜಾ ನು ಮೊದಲನೆಯ ಭೂಮಿಯ ಕಾಣಿಕೆಯನ್ನು ೧೭೨೪ರಲ್ಲಿ ಮಾಡಿರುವುದಾಗಿ ತಿಳಿದು ಬರುವುದು. ಸರ್ ಸಾಲಾರ ಜಂಗನು ೧೯ನೇ ಶತಮಾನದಲ್ಲಿ ಜಹಗೀರ್ ಮತ್ತು ಇನಾಮುಗಳ ಪರಿಸ್ಥಿತಿಯನ್ನು ಸುಧಾರಿಸಲು "ದರಿಯೂಪ ಇನಾಮಲ್" ಎಂಬ ಪ್ರತ್ಯೇಕ ಇಲಾಖೆಯನ್ನು ಪ್ರಾರಂಭಿಸಿದನು.

## ಭೂಮಿಯ ಸ್ವಾಮಿತ್ವ

ಭೂ ಒಡೆತನ ಅಥವಾ ಮಾಲೀಕತ್ವದಲ್ಲಿ ಅನೇಕ ಪ್ರಕಾರಗಳು ಉಂಟು. ಬ್ರಿಟೀಷರ ಆಳ್ವಿಕೆಯ ನಂತರ ರೈತವಾರಿ ಪದ್ಧತಿಯು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದು ದೇಶ ವ್ಯಾಪ್ತಿಯಾಗಿ ಕಂಡುಬರುವುದು. ರೈತವಾರಿ ಪದ್ಧತಿಯಲ್ಲಿ ಸಾಗುವಳಿಗೆ ಒಳಪಟ್ಟಿರುವ ಎಲ್ಲಾ ಭೂಮಿಯು ಸರ್ಕಾರಕ್ಕೆ ಸೇರಿದ್ದು , ಖಾತಾದಾರರು, ಪಟ್ಟಾದಾರರು ಅದರ ಅಧೀಕೃತ ಮಾಲೀಕರು ಎಂದು ಪರಿಗಣಿಸಲಾಗುವುದು. ಇದಕ್ಕೆ ಪ್ರತಿಯಾಗಿ ಸಾಗುವಳಿದಾರರು ನಿಗದಿತ ಭೂಕಂದಾಯವನ್ನು ನೀಡುವರು. ಭೂಮಿಯ ಪರಭಾರಗೆ ಮುಕ್ತ ಅವಕಾಶ ಉಂಟು.

ಹೈದರಾಬಾದ್ ಪ್ರಾಂತ್ಯದಲ್ಲಿ ರೈತವಾರಿ ಪದ್ಧತಿಯಲ್ಲದೆ "ಪಾನಮಸ್ತಾ", "ತಾವುದ", "ಇಜಾರಾ" ಮುಂತಾದವುಗಳು ರೂಢಿಯಲ್ಲಿ ಇದ್ದವು. ಹೈದರಾಬಾದ್ ಭೂಕಂದಾಯ ಅಧಿನಿಯಮ ೧೯೦೭ರಲ್ಲಿ ರೈತವಾರಿ ಪದ್ದತಿಯ ಜಮೀನಿನ ಭೂಕಂದಾಯ ನಿರ್ಣಯ ಮುಂತಾದವುಗಳನ್ನು ವಿವರಿಸಲಾಗಿದೆ. ೧೯೦೭ರ ಹೈದರಾಬಾದ್ ಕಾಯಿದೆಯ ಬೊಂಬಾಯಿ ಭೂ ಕಂದಾಯ ಕಾಯಿದೆ ೧೮೭೦ರ ಅನ್ವಯ ರಚಿಸಲಾಯಿತು. ಇಂದು ಗುಲಬರ್ಗಾ ಜಿಲ್ಲೆಯಲ್ಲಿ ಬಜಾರಿಯಲ್ಲಿರುವ ರೈತವಾರಿ ಪದ್ಧತಿಯಂತೆ ಪ್ರತಿ ಒಂದು ಹಿಡುವಳಿಗೆ ಒಂದು ಸರ್ವೆ ನಂಬರ್ ಇರುವುದು. ಭೂ ಹಿಡುವಳಿದಾರನನ್ನು ನೊಂದಾಯಿತ ಪಟ್ಟಾದಾರ ಖಾತೆದಾರ, ಉಪಭೋಗಿಸುವವನು ಎಂದು ಹೇಳಲಾಗುವುದು ಆದರೆ ಈ ಅಧಿಕಾರವು ಅವನು ನಿಯಮಿತವಾಗಿ ಭೂಕಂದಾಯ ನೀಡಿದಾಗ ಮಾತ್ರ ಪ್ರಾಪ್ತವಾಗುವುದು. ಈ ಜಿಲ್ಲೆಯಲ್ಲಿ ಈ ಹಿಂದೆ ಪ್ರಚಲಿತ ಇದ್ದ ವಿವಿಧ ರೈತವಾರಿ ಹಿಡುವಳಿಗಳ ವಿವರ ಈ ರೀತಿ ಇರುವುದು.

**ಪಟ್ಟಾದಾರಿ** : ಈ ಪದ್ಧತಿಯಲ್ಲಿ ಹಿಡುವಳಿದಾರನು ತಾನೇ ಸ್ವಂತ ಭೂಮಿಯನ್ನು ಸಾಗುವಳಿ ಮಾಡುವವನು ಅಥವಾ ಆಳುಗಳ ಮೂಲಕ ಸಾಗುವಳಿ ಮಾಡಿಸುವವನು.

**ಪೋಟ ಪಟ್ಟಾದಾರಿ**

ಇಬ್ಬರು ಅಥವಾ ಹೆಚ್ಚು ಸಾಗುವಳಿದಾರರು ಜಂಟಿಯಾಗಿ ಪಟ್ಟಾಹೊಂದಿರುವರು ಪಟ್ಟಾದಾರನು ಪೋಟ ಪಟ್ಟಾದಾರನನ್ನು ಭೂಮಿಯಿಂದ ಹೊರಗೆ ಹಾಕುವುದು ಅಥವಾ ಅವನು ನೀಡಬೇಕಾದ ಭೂಕಂದಾಯವನ್ನು ಹೆಚ್ಚಿಸುವಂತಿಲ್ಲ.

**ಶಿಖಿಮಿದಾರ**

ಈ ಹಿಡುವಳಿ ಪದ್ಧತಿಯಲ್ಲಿ ಭೂಮಿಯ ಮಾಲೀಕನು ಇನ್ನೊಬ್ಬರಿಗೆ ಕೆಲವು ನಿಬಂಧನೆಗೆ ಒಳಪಟ್ಟ ಸಾಗುವಳಿಗೆ ನೀಡುವನು. ಒಪ್ಪಂದ ಮುಗಿಯುವವರೆಗೆ ಸಾಗುವಳಿದಾರನನ್ನು ಭೂಮಿಯಿಂದ ಹೊರಗೆ ಹಾಕುವಂತಿಲ್ಲ.

**ಅಸಾಮಿ - ಶಿಖಿಮಿ**

ಈ ಪದ್ಧತಿಯಲ್ಲಿ ಭೂ ಸಾಗುವಳಿಯನ್ನು ತನ್ನ ಇಚ್ಛೆ ಪೂರೈಸುವ ವರೆಗೆ ಹೊಂದಿರಬಹುದು.

ಇಂತಹ ಹಿಡುವಳಿದಾರರನ್ನು ರಕ್ಷಿಸಲು ಸರ್ಕಾರವು ೧೯೪೪ರಲ್ಲಿ ಒಂದು ಕಾನೂನನ್ನು ಜಾರಿಯಲ್ಲಿ ತಂದಿತು.

**ಪಾನ್‌ಮಸ್ತಾ**

ಈ ಬಗೆಯ ಹಿಡುವಳಿಯು ಒಂದು ಒಪ್ಪಂದವಾಗಿದ್ದು ಭೂಮಿಯನ್ನು ಸಾಗುವಳಿದಾರನಿಗೆ ಒಂದು ನಿಗದಿತ ಅವಧಿಗೆ ಮಾತ್ರ ಬಾಡಿಗೆಗೆ ಕೊಡಬಹುದಾಗಿದ್ದು ಅದನ್ನು ಹೆಚ್ಚಿಸವಂತಿಲ್ಲ.

**ತಾವುದ ಅಥವಾ ಸರಬಸ್ತಾ**

ರೈತಕವಾರಿ ಪದ್ಧತಿಯು ಜಾರಿಯಲ್ಲಿ ಬರುವ ಪೂರ್ವದಲ್ಲಿ ಈ ವ್ಯವಸ್ಥೆಯು ಜಾರಿಯಲ್ಲಿ ಇತ್ತು. ಇದರ ಅನ್ವಯ ಜಮೀನಿನ ಗುತ್ತಿಗೆದಾರರಿಂದ ಭೂಕಂದಾಯವಲ್ಲದೇ ಇತರೇ ಉಪತೆರಿಗೆಗಳನ್ನು ಸಹ ವಸೂಲು ಮಾಡಲಾಗುತ್ತಿತ್ತು. ಒಂದು ನಿರ್ದಿಷ್ಟ ಅವಧಿಯ ವರೆಗಿನ ಗುತ್ತಿಗೆಯ ವ್ಯವಸ್ಥೆ ಇದಾಗಿತ್ತು. ಒಂದನೆಯ ಸಾಲಾರಜಂಗ ಅವರ ಕಾಲದಲ್ಲಿ ಇದನ್ನು ಅದ್ದು ಪಡಿಸಲಾಯಿತು.

**ಇಜಾರಾ**

ಯಾವುದೇ ಕಾರಣದಿಂದ ಒಂದು ಪ್ರದೇಶದ ಗ್ರಾಮದ ಜನರು ಅದನ್ನು ತೊರೆದು ಹೋದನಂತರ ಅಂತಹ ವಸತಿ ರಹಿತ ಪ್ರದೇಶದಲ್ಲಿ ಪುನಃ ಜನವಸತಿ ನೆಲೆಸುವಂತಾಗಿ, ಪಾಳು ಬಿದ್ದ ವಿಶಾಲವಾದ ಭೂಮಿಯನ್ನು ಸಾಗುವಳಿಗೆ ಒಳಪಡಿಸುವ ಉದ್ದೇಶದಿಂದ ಕಡಿಮೆ ಕಂದಾಯದ ಮೇಲೆ ದೀರ್ಘಕಾಲದ ಅಂದರೆ ೩೦-೪೦ ವರ್ಷ ಗುತ್ತಿಗೆಗೆ

ನೀಡಲಾಗುತ್ತಿತ್ತು. ಪ್ರದೇಶವು ಅಭಿವೃದ್ಧಿಯಾದಂತೆ ಕಂದಾಯವನ್ನು ಕ್ರಮೇಣವಾಗಿ ಹೆಚ್ಚಿಸಲಾಗುತ್ತಿತ್ತು. ಈ ಪದ್ಧತಿಯನ್ನು ಒಂದನೇ ಸಾಲರ ಜಂಗ ಅವರು ಪ್ರಾರಂಭಿಸಿದರು.

**ಜಹಗೀರುಗಳು**

ಜಹಗೀರ ಪದ್ದತಿಯು ಮೊಘಲರ ಕಾಲದಲ್ಲಿ ವ್ಯಾಪಕಗೊಂಡು ನಿಜಾಮರ ಕಾಲದಲ್ಲಿ ಮುಂದುವರೆಯಿತು. ಆಳರಸರು ಜಹಗೀರನ್ನು ವಿಶೇಷ ಸೇವೆಗಾಗಿ ಪ್ರಜೆಗಳಿಗೆ ಅಥವಾ ಜಹಗೀರು ಪಡೆಯುವವನ ಸ್ಥಾನಮಾನ, ಗೌರವಗಳನ್ನು ಕಾಯ್ದುಕೊಳ್ಳಲು ಪುಕ್ಕಟೆಯಾಗಿ ಭೂಮಿಯನ್ನು ಕೊಡುತ್ತಿದ್ದರು. ಒಂದು ಅಥವಾ ಹೆಚ್ಚು ಗ್ರಾಮಗಳನ್ನು ಸಹ ಕೊಡಬಹುದಾಗಿತ್ತು. ಜಹಗೀರುಗಳಲ್ಲಿ ಸೇವೆಗಳಿಗೆ ಅನುಸಾರ, ನಿಬಂಧನೆಗಳಿಗೆ ಅನುಸಾರ ಅನೇಕ ವಿಧಗಳು ಇದ್ದವು. ಅವುಗಳೆಂದರೆ ಪೈಗಾ ಅಥವಾ ಜಮಾಯತ್, ಜಹಗೀರ್ ಅಲ್‌ತಮ ಜಹಗೀರಾ, ಜಾಟ್ ಜಹಗೀರ್, ತನಖಾ ಜಹಗೀರ, ಮಶ್‌ರೂತ್, ಜಹಗೀರ್, ಮತ್ತು ಮದದಮೇಶಾ ಜಹಗೀರ್, ಮೂಲತಹ ಪೈಗಾ ಜಹಗೀರುಗಳನ್ನು ಆಗಿನ ಅರಸು ನಿಜಾಮ ಅಲಿಖಾನರು ನಿಜಾಮರ ಅರಮನೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ, ಸೈನ್ಯ ವ್ಯವಸ್ಥೆಗಾಗಿ ಅಬ್ದುಲ್ ಖೈರಖಾನ್ ಎಂಬುವರಿಗೆ ನೀಡಿದ್ದರು. ಪೈ ಎಂದರೆ ಕುದುರೆಯ ಲಾಯ ಎಂದು ಅರ್ಥ. ಈ ಜಹಗೀರುಗಳು ಬಹಳ ವ್ಯಾಪಕವಾಗಿದ್ದವು. ಅಲ್‌ತಮ ಜಹಗೀರುಗಳು ರಾಜ ಮುದ್ರೆಯ ಮೂಲಕ ದತ್ತವಾದ ಕಂದಾಯ ರಹಿತ ಕೊಡುಗೆಗಳಾಗಿದ್ದವು. ಇದು ಖಾಯಂ ಮತ್ತು ವಂಶಪಾರಂಪಾರಿಕ ಜಹಗೀರುಗಳಾಗಿತ್ತು. ಯಾವುದೇ ಸೇವಾ ನಿರ್ಬಂದವೂ ಇಲ್ಲದೇ ದಾನ ಪಡೆದವನ ಉಪಜೀವನಕ್ಕಾಗಿ ನೀಡಿದ ವಿಸ್ತಾರವಾದ ಭೂ ಕಾಣಿಕೆ ಜಾಟ ಜಹಗೀರಾಗಿತ್ತು. ತನಖಾ ಎಂಬುದು ಮಾಡಿದ ಸೇವೆಗೆ ಪ್ರತಿಯಾಗಿ ವೇತನ ರೂಪವಾಗಿ ನೀಡುವ ಜಹಗೀರಾಗಿತ್ತು. ಮಶರೂತ್ ಜಹಗೀರನ್ನು ನಿರ್ದಿಷ್ಟಸೇವೆಗೆ ಅಂದರೆ ಸೈನಿಕ ಅಥವಾ ನಾಗರಿಕ ಅಥವಾ ಧಾರ್ಮಿಕ ಸೇವೆಗಳಿಗೆ ಪ್ರತಿಯಾಗಿ ನೀಡಲಾಗುತ್ತಿತ್ತು. ಈ ಸೇವೆಗಳು ದೊರೆಯುವವರೆಗೆ ಮಾತ್ರ ಜಹಗೀರು ಮುಂದುವರೆಯುತ್ತಿತ್ತು. ಮದದ ಮೇಶ ಜಹಗೀರು ದಾನ ಪಡೆದವನ ಜೀವನ ನಿರ್ವಹಣೆಗಾಗಿ ಅಥವಾ ಅವನ ಆದಾಯಕ್ಕೆ ಪೂರಕವಾಗಿ ಕೊಡಲಾಗುತ್ತಿತ್ತು. ಈ ಜಹಗೀರುಗಳಲ್ಲದೇ ಸರ್ಫೆಖಾಸ ಜಮೀನುಗಳು ಇರುತ್ತಿದ್ದವು. ಇವುಗಳ ಆದಾಯ ನಿಜಾಮನ ಖಾಸಗಿ ಖಜಾನೆಗೆ ಸೇರುತ್ತಿತ್ತು. ಇವುಗಳು ಅಲ್ಲದೇ ಚಿಕ್ಕಪುಟ್ಟ ಇನಾಮುಗಳು ಇದ್ದವು. ಇನಾಮು ಹಿಡುವಳಿ ಎಂದರೆ ಸರ್ಕಾರ ತನ್ನ ಕಂದಾಯದ ಹಕ್ಕನ್ನು ಬಿಟ್ಟುಕೊಟ್ಟು ಪರಬಾರೆ ಮಾಡಿದ ಕೊಡುಗೆಯ ಭೂಮಿ. ಅನೇಕ ಗ್ರಾಮಗಳಲ್ಲಿ ಇನಾಮ ಜಮೀನುಗಳು ಹಂಚಿಹೋಗಿದ್ದವು. ಕೆಲವು ಸಂದರ್ಭಗಳಲ್ಲಿ ಇಡೀ ಗ್ರಾಮವೇ ಇನಾಮು ಆಗಿರುತ್ತಿತ್ತು. ಹಳೆಯ ಹೈದರಾಬಾದ್ ಸಂಸ್ಥಾನದಲ್ಲಿ ಜಮೀನುದಾರರ ಸ್ಥಾನಮಾನಗಳು, ಖಾಯಂ ಆಗಿ ಭೂಕಂದಾಯ ಸರ್ವೆಕ್ಷಣೆ ಮಾಡಿದ್ದ ಇತರೇ ಪ್ರದೇಶಗಳ ಜಮೀನುದಾರರಿಗಿಂತ ತೀರ ಭಿನ್ನವಾಗಿದ್ದವು.

ಜಹಗೀರು ಆಯೋಗ ೧೯೪೭ ವರದಿ ಮಾಡಿರುವಂತೆ ಹೈದರಾಬಾದಿನಲ್ಲಿ ಜಹಗೀರುದಾರರಿಗೆ ಭೂಮಿಯ ಒಡೆತನದ ಯಾವ ಹಕ್ಕೂ ಇರಲಿಲ್ಲ. ಅವರು ಕೇವಲ ಕಂದಾಯವನ್ನು ಪಡೆಯುವ ಹಕ್ಕನ್ನು ಮಾತ್ರ ಹೊಂದಿದ್ದರು. ಅಲ್ಲದೇ ತಮ್ಮ ಜಹಗೀರನ ವ್ಯಾಪ್ತಿಯಲ್ಲಿ ಅಬಕಾರಿ, ಅರಣ್ಯ ಮತ್ತು ಮೀನುಗಾರಿಕೆಯ ಮೇಲೆ ಅಧಿಕಾರ ಹೊಂದಿದ್ದರಲ್ಲದೆ ಕೆಲವರು ನ್ಯಾಯಾಧಿಕರಣದ ಮತ್ತು ಪೋಲಿಸ್ ಅಧಿಕಾರಗಳನ್ನು ಹೊಂದಿದ್ದರು. ಕಾಲಕ್ರಮೇಣ ಈ ಅಧಿಕಾರಗಳು ಕಡಿಮೆಯಾಗುತ್ತಾ ೧೯೪೭ರಲ್ಲಿ ಅಂತಿಮವಾಗಿ ರದ್ದುಪಡಿಸಲಾಯಿತು. ಇದು ಜಹಗೀರ ಆಯೋಗದ ಜಾರಿಯಲ್ಲಿ ಬಂದ ಮೊದಲ ಶಿಫಾರಸ್ಸು ಆಗಿದ್ದಿತು. ಜಹಗೀರದಾರರು ತಮಗೆ ಜಹಗೀರು ಪ್ರಾಪ್ತವಾದಾಗಿನಿಂದ ತಾವೇ ನೇಮಿಸಿಕೊಂಡ ಅಧಿಕಾರಿಗಳಿಂದ ಕಂದಾಯ ವಸೂಲಿ ಮಾಡುತ್ತಿದ್ದರೂ ಅಗತ್ಯವಾದ, ಸ್ಪಷ್ಟವಾದ, ವಿದ್ಯುಕ್ತ ಅಧಿಕಾರಿಗಳ ಅಧೀಕೃತ ಮಂಜೂರಾತಿ ಇರಲಿಲ್ಲ. ಜಹಗೀರುದಾರರ ಕಂದಾಯ ವಸೂಲಿಯ ಅಧಿಕಾರವನ್ನು ರೈತರು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ೧೯೩೫ರಲ್ಲಿ ಜಹಗೀರು ಕಂದಾಯ ವಸೂಲಿಯ ನಿಯಮಗಳನ್ನು ಜಾರಿಗೆ ತಂದು ಈ ಲೋಪವನ್ನು ಸರಿಪಡಿಸಲಾಯಿತು. ಒಂದು ಕಾಲದಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಪ್ರದೇಶದಲ್ಲಿಯ ಭೂಮಿಯು ಜಹಗೀರಾಗಿತ್ತು. ಜಹಗೀರದಾರರಿಗೆ ವಹಿಸಿಕೊಟ್ಟ ಪ್ರದೇಶಗಳಲ್ಲಿ ಕಂದಾಯ ಆಡಳಿತದ ಮಟ್ಟ ಬಹಳ ಅಸಮರ್ಪಕವಾಗಿತ್ತು. ಈ ಪರಿಸ್ಥಿತಿ ೧೯೪೯ ರವೆಗೆ ಅಂದರೆ ಎಲ್ಲಾ ಸರ್ಫೆಖಾಸ ಜಮೀನುಗಳನ್ನು ದಿವಾಣಿ ಭೂಮಿಯ ಜೊತೆಗೆ ಸೇರಿಸುವ ವರೆಗೆ ಮುಂದುವರೆಯಿತು. ಅದೇ ವರ್ಷ ಎಲ್ಲಾ ಜಹಗೀರ ಮತ್ತು ಮುಖ್ತಾ (ಗುತ್ತಿಗೆ) ಗ್ರಾಮಗಳ ಆಡಳಿತವನ್ನು

ಸರ್ಕಾರ ವಹಿಸಿಕೊಂಡಿತು. ಇದು ೧೯೪೯ ಆಗಸ್ಟ್ ೧೫ರಿಂದ ಜಾರಿಯಲ್ಲಿ ಬಂದಿತು. ಜಹಗೀರುಗಳ ಆಡಳಿತಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಲಾಯಿತು. ಜಹಗೀರ ಪದ್ಧತಿಯನ್ನು ತೆಗೆದುಹಾಕಿದ್ದರಿಂದ ಸರ್ಕಾರ ಮತ್ತು ರೈತರ ನಡುವೆ ಇದ್ದ ಹಿತಾಸಕ್ತಿಗಳ ತೊಲಗುವಿಕೆಯಿಂದ ಭೂ ಹಿಡುವಳಿಯ ಸಮಸ್ಯೆಯನ್ನು ತುಲನಾತ್ಮಕವಾಗಿ ಸರಳಗೊಳಿಸಲಾಯಿತು.

## ಭೂಮಾಪನ ಮತ್ತು ಕಂದಾಯ ವ್ಯವಸ್ಥೆ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಪ್ರಥಮವಾಗಿ ೧೮೭೫ರ ಸುಮಾರಿಗೆ (ಸರ್ವೆಕ್ಷಣ) ಭೂಮಿಯನ್ನು ಅಳೆದು ಕಂದಾಯ ನಿಗದಿಗೊಳಿಸುವ ಪ್ರಕ್ರಿಯೆ ಪ್ರಾರಂಭವಾದಂತೆ ಕಂಡುಬರುವುದು. ಆಗಿನವರೆಗಿನ ಭೂ ಅಳತೆಯ ವಿಧಾನಗಳಲ್ಲಿನ ಲೋಪ ದೋಷಗಳನ್ನು ಬಹುಮಟ್ಟಿಗೆ ಸರಿಪಡಿಸಲಾಯಿತು. ಈ ಭಾಗದಲ್ಲಿ ಭೂಮಾಪನಕ್ಕೆ ಬೊಬಾಯಿ ಪ್ರಾಂತದಲ್ಲಿನ ಬೊಂಬಾಯಿ ಪದ್ದತಿಯನ್ನು ಅನುಸರಿಸಲಾಯಿತು.

ಈ ವಿಧಾನದಲ್ಲಿ ಯಾವುದೇ ಮಧ್ಯವರ್ತಿಗೆ ಅವಕಾಶ ಇರಲಿಲ್ಲ. ನೇರವಾಗಿ ಭೂಸಾಗುವಳಿದಾರ ಮಾಲೀಕನೊಂದಿಗೆ ಸಂಪರ್ಕ ಬೆಳೆಸಿ ಜಮೀನಿನ ಮೋಜನಿಯನ್ನು ಸರಪಳಿ (ಚೈನ) ವಿಧಾನದಿಂದ ಅಳೆಯಲಾಗುತ್ತಿತ್ತು. ಹಳ್ಳಿಯ ನಕಾಶೆಯನ್ನು ತಯಾರಿಸುವುದರೊಂದಿಗೆ ಭೂಮಿಯನ್ನು ಎಕರೆ ಮತ್ತು ಗುಂಟೆಗಳಲ್ಲಿ ಅಳೆಯಲಾಯಿತು. ಮೂಲ ಕಂದಾಯವನ್ನು ನಿರ್ಧರಿಸುವಲ್ಲಿ ಭೂಮಿಯ ಮಣ್ಣಿನ ಫಲವತ್ತತೆಯನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತಿತ್ತು. ೧೮೭೮ರಲ್ಲಿ ಬೀದರ್ ರಾಯಚೂರು, ಗುಲಬರ್ಗಾ ಭಾಗಗಳಲ್ಲಿ ಮಣ್ಣಿನ ಫಲವತ್ತತೆಯ ಅನುಸಾರ ಭೂ ವರ್ಗೀಕರಣ ಕೆಲಸ ಬೊಂಬಾಯಿ ಮಾದರಿಯಲ್ಲಿ ಪ್ರಾರಂಭವಾಯಿತು. ಬೊಂಬಾಯಿ ಪದ್ಧತಿಯಲ್ಲಿ ಮಣ್ಣನ್ನು ೧೦ ವಿವಿಧ ಬಗೆಯಲ್ಲಿ ವರ್ಗೀಕರಿಸಲಾಗುತ್ತಿದ್ದರೆ ಗುಲಬರ್ಗಾ ಭಾಗದಲ್ಲಿ ಈ ವರ್ಗೀಕರಣವನ್ನು ಏಳಕ್ಕೆ ಇಳಿಸಲಾಯಿತು. ಕಂದಾಯವನ್ನು ನಿರ್ಣಯಿಸುವಲ್ಲಿ ಹಳೆಯ ಹೈದರಾಬಾದ್ ಪ್ರಾಂತದಲ್ಲಿ ಪಶ್ಚಿಮ ಭಾಗದ ಗುಲಬರ್ಗಾ ಜಿಲ್ಲೆಯಲ್ಲಿ ಕಪ್ಪು ರೇವೆ ಮಣ್ಣಿನ ಭೂಮಿ ಮತ್ತು ಕೆಂಪು ಮಣ್ಣು ಮಿಶ್ರಿತ (ಮಸಾರಿ) ಎಂಬ ಎರಡು ಪ್ರಮುಖ ವರ್ಗೀಕರಣಗಳು ಇದ್ದವು.

೧೮೮೩ರಲ್ಲಿ ಮಣ್ಣಿನ ಫಲವತ್ತತೆಗೆ ಅನುಸಾರ ಭೂಮಿಯನ್ನು ವರ್ಗೀಕರಿಸಿದ ನಂತರ ಭೂಕಂದಾಯವನ್ನು ನಿಗದಿಗೊಳಿಸಲಾಯಿತು. ಇದೇ ವರ್ಷ ಜಿಲ್ಲೆಯನ್ನು ಪ್ರಥಮವಾಗಿ ಪುನರ್ ರಚಿಸಲಾಯಿತು. ಇದುವರೆಗೆ ಸರ್ಫೆಖಾನಿ ತಾಲೂಕುಗಳಾಗಿದ್ದ ಸುರಪುರ ಮತ್ತು ಶಹಪುರಗಳನ್ನು ಗುಲಬರ್ಗಾ ಜಿಲ್ಲೆಗೆ ಸೇರಿಸಲಾಯಿತು. ೧೮೭೩ರಲ್ಲಿ ಈ ಜಿಲ್ಲೆಯು ಆರು ತಾಲೂಕುಗಳನ್ನು ಒಳಗೊಂಡಿತ್ತು. ೧೮೮೩ರಲ್ಲಿ ಸುರಪುರ ಮತ್ತು ಶಹಾಪುರಗಳನ್ನು ಸೇರಿಸಲಾಯಿತು. ಪ್ರಪ್ರಥಮವಾಗಿ ಈ ಜಿಲ್ಲೆಯಲ್ಲಿ ತಾಲೂಕುವಾರ ಕಂದಾಯ ನಿಗದಿ ಮಾಡಿದ ವಿವರ ಈ ರೀತಿ ಇರುವುದು.

ಗುಲಬರ್ಗಾ ೧೮೮೯, ಅಫಜಲ್‌ಪುರ ೧೮೮೩, ಆಳಂದ ೧೮೮೩, ಚಿತ್ತಾಪುರ ೧೮೮೮, ಚಿಂಚೋಳಿ -೧೮೮೯, ಯಾದಗಿರಿ ೧೮೯೧, ಸೇಡಂ ೧೮೯೧, ಜೇವರ್ಗಿ ೧೮೫೧, ಶಹಪುರ ೧೮೮೯, ಸುರಪುರ ೧೮೮೮.

## ಕಂದಾಯ ಪರಿಷ್ಕರಣ

ಬ್ರಿಟೀಷ್ ಆಡಳಿತ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಒಮ್ಮೆ ನಿಗದಿತ ಭೂ ಕಂದಾಯವನ್ನು ಮೂವತ್ತು ವರ್ಷಗಳ ನಂತರ ಪುನರ್ ಪರಿವೀಕ್ಷಣೆಗೆ ಒಳಪಡಿಸಲಾಗುತ್ತಿತ್ತು. ಆದರೆ ಗುಲಬರ್ಗಾ ಜಿಲ್ಲೆಯಲ್ಲಿ ಅನೇಕ ತಾಲೂಕುಗಳ ಗಡಿಗಳ ಮರು ಹೊಂದಾಣಿಕೆಯ ಕೆಲಸ ನಡೆದದ್ದರಿಂದ ೧೯೧೫ರಲ್ಲಿ ಪುನರ್ ಪರಿವೀಕ್ಷಣೆ ಕೆಲಸ ಆರಂಭವಾಯಿತು. ಈ ಕೆಲಸ ಮೊದಲಿಗೆ ಸೇಡಂ ತಾಲೂಕಿನಿಂದ ಪ್ರಾರಂಭಗೊಂಡು ೧೯೨೮ರ ವರೆಗೆ ಮುಂದುವರೆಯಿತು ಮತ್ತು ಬೊಂಬಾಯಿ ಮಾದರಿಯಲ್ಲಿ- ಈ ಕೆಲಸವನ್ನು ಪ್ರಾರಂಭಿಸಲಾಯಿತು. ಪರಿಷ್ಕರಣೆಗೊಂಡ ದರಗಳು ಈ ರೀತಿ ಇದ್ದವು.

ಒಣ ಭೂಮಿಯ ಕಂದಾಯ ಒಂದು ಎಕರೆಗೆ ಒಂದು ರೂಪಾಯಿ ಎಂಟು ಆಣೆಯಿಂದ ಎರಡು ರೂ. ೧೨ ಆಣೆಗೆ ಹೆಚ್ಚಿಸಲಾಯಿತು. ನೀರಾವರಿ ಭೂಮಿಯ ಕಂದಾಯ ದರ ರೂ. ೧೨ ರಿಂದ ೧೪ ರವರೆಗೆ ಹೆಚ್ಚಿಸಲಾಯಿತು. ಭಾಗಾಯತ (ತೋಟ ಪಟ್ಟಿ) ದರಗಳು ರೂ. ಐದರಿಂದ ಆರಕ್ಕೆ ಹೆಚ್ಚಿಸಲಾಯಿತು.

## ಭೂಕಂದಾಯ ವಸೂಲಿ

ನಿಗದಿತ ಭೂಕಂದಾಯವನ್ನು ಕಂದಾಯ ಇಲಾಖೆಯ ಅಧಿಕಾರಿಗಳು ವಾರ್ಷಿಕ ಎರಡು ಕಂತುಗಳಲ್ಲಿ ವಸೂಲು ಮಾಡುತ್ತಿದ್ದರು. ಮೊದಲನೆಯ ಕಂತನ್ನು ಖಾರಿಷ್‌ಕಿಸ್ತಿ ಎಂದು ಕರೆಯುತ್ತಿದ್ದರು. ಅದನ್ನು ಜನವರಿ ೧ ರಿಂದ ೨೧ರ ಅವಧಿಯಲ್ಲಿ ಯಾವುದೇ ಬಾಕಿಗೆ ಅವಕಾಶ ಇಲ್ಲದಂತೆ ವಸೂಲು ಮಾಡಲಾಗುತ್ತಿತ್ತು. ಎರಡನೆಯ ಕಂತಿನ ಕಂದಾಯ "ರಬಿಖಿಸ್ತಿ" ಯನ್ನು ಏಪ್ರಿಲ್ ನಂತರ ಸಂಗ್ರಹಿಸಲಾಗುತ್ತಿತ್ತು. ಕಂದಾಯವನ್ನು ತಹಶೀಲ್‌ದಾರರು, ಕಂದಾಯ ಇನ್‌ಸ್ಪೆಕ್ಟರ್, ಪಟವಾರಿ (ಶ್ಯಾನುಭೋಗ) ಮತ್ತು ಪಟೇಲ ವಸೂಲು ಮಾಡುತ್ತಿದ್ದರು. ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಈ ಕೆಲಸ ನಡೆಯುತ್ತಿತ್ತು. ಕಂದಾಯ ವಸೂಲಿ ಆಗದೇ ಇರುವ ಸಂದರ್ಭದಲ್ಲಿ ಹೈದರಾಬಾದ್ ಭೂಕಂದಾಯ ಕಾನೂನಿನ ಅನ್ವಯ ಕಠಿಣ ಕ್ರಮಗಳ ಮೂಲಕ ವಸೂಲು ಮಾಡಲಾಗುತ್ತಿತ್ತು. ೧೯೬೧-೬೨ರಲ್ಲಿ ಜಿಲ್ಲೆಯ ಒಟ್ಟು ಕಂದಾಯ ಬೇಡಿಕೆ ರೂ. ೩೩.೧೯ ಲಕ್ಷ ಆಗಿದ್ದರೆ ೧೯೬೪-೬೫ರಲ್ಲಿ ಇದು ರೂ. ೬೬.೨೮ ಲಕ್ಷಕ್ಕೆ ಹೆಚ್ಚಳಗೊಂಡಿತು.

**೧೯೬೪-೬೫ರಲ್ಲಿ ತಾಲೂಕುವಾರ ಜಿಲ್ಲೆಯ ಕಂದಾಯ ಬೇಡಿಕೆ ವಸೂಲಿ ಮತ್ತು ಬಾಕಿ ಈ ರೀತಿ ಇತ್ತು.**

| ತಾಲೂಕು | ಬೇಡಿಕೆ | ಸಂಗ್ರಹ | ಬಾಕಿ (ಲಕ್ಷ ರೂ.ಗಳಲ್ಲಿ) |
|---|---|---|---|
| ಗುಲಬರ್ಗಾ | ೯.೫೩ | ೫.೧೦ | ೪.೪೩ |
| ಆಳಂದ | ೫.೩೮ | ೫.೦೦ | ೦.೩೮ |
| ಅಪಜಲಪುರ | ೪.೪೧ | ೪.೦೧ | ೦.೪೦ |
| ಚಿತ್ತಾಪುರ | ೧೨.೨೬ | ೮.೪೨ | ೩.೮೪ |
| ಸೇಡಂ | ೪.೧೮ | ೩.೭೩ | ೦.೪೫ |
| ಯಾದಗಿರಿ | ೮.೬೭ | ೪.೩೦ | ೪.೩೭ |
| ಸುರಪುರ | ೪.೯೮ | ೩.೬ | ೧.೩೧ |
| ಶಹಪುರ | ೫.೦೫ | ೪.೭೫ | ೦.೩೦ |
| ಜೇವರ್ಗಿ | ೫.೯೧ | ೫.೧೬ | ೦.೭೫ |
| ಚಿಂಚೋಳಿ | ೫.೯೧ | ೪.೯೩ | ೦.೯೮ |

## ೧೯೫೦ರ ನಂತರದ ಬದಲಾವಣೆಗಳು

೧೯೫೦ರಲ್ಲಿ ಜಹಗೀರುಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಯಿತು. ನಾಲ್ಕು ಹೊಸ ತಾಲೂಕುಗಳನ್ನು ಅಂದರೆ ಅಫಜಲ್‌ಪುರ, ಆಳಂದ, ಚಿತ್ತಾಪುರ, ಮತ್ತು ತಾಂಡೂರುಗಳನ್ನು ಸೇರಿಸಲಾಯಿತು. ಇದರಿಂದ ಒಟ್ಟು ತಾಲೂಕುಗಳ ಸಂಖ್ಯೆ ೧೨ ಆಯಿತು. ೧೯೫೬ರಲ್ಲಿ ತಾಂಡೂರು ಮತ್ತು ಕೊಡಂಗಲ್‌ಗಳು ಆಂಧ್ರಪ್ರದೇಶಕ್ಕೆ ವರ್ಗಾವಣೆಗೊಂಡವು. ೧೯೫೦ರಲ್ಲಿ ಜಹಗೀರುಗಳನ್ನು ರದ್ದುಗೊಳಿಸಿದ ನಂತರ ತಾಲೂಕುವಾರು ಇದ್ದಂತೆ ದಿವಾನಿ ಮತ್ತು ಪೈಗಾ ಗ್ರಾಮಗಳ ಸಂಖ್ಯೆ ಈ ಮುಂದಿನಂತೆ ಇತ್ತು. ಆವರಣದಲ್ಲಿನ ಸಂಖ್ಯೆಯು ಪೈಗಾ ಗ್ರಾಮಗಳನ್ನು ಸೂಚಿಸುವುದು. ಗುಲಬರ್ಗಾ ೧೧೬ (೩೪), ಅಪಜಲಪುರ ೧೦ (೮೦), ಆಳಂದ ೪೬ (೮೩) ಚಿತ್ತಾಪುರ ೩೩ (೮೮), ಚಿಂಚೋಳಿ ೯೨ (೫೩), ಯಾದಗಿರಿ ೧೧೮ (೨೪), ಸೇಡಂ ೫೪ (೫೭) ಜೇವರ್ಗಿ ೧೨೬ (೩೨) ಶಹಪುರ ೧೨೧ (೩೮) ಸುರಪುರ ೧೪೪ (೪೩)

## ಜಮಾಬಂದಿ ಪದ್ಧತಿ

ಜಮಾ ಎಂದರೆ ಸರಕಾರಕ್ಕೆ ಬರಬೇಕಾದ ಪಾಲು. ಬಂದ ಎಂದರೆ ಸರಕಾರಕ್ಕೆ ಬರುವ ಆದಾಯ ನಿಗದಿಪಡಿಸುವುದು ಎಂದು ಅರ್ಥ. ರಾಜನಿಗೆ ಬರಬೇಕಾದ ಪಾಲನ್ನು (ರಾಜಸ್ವ) ನಗದಿಪಡಿಸುವುದು ಬಹು ಹಿಂದಿನಿಂದಲೂ ನಡೆದು

ಬಂದಿದೆ. ಅದೇ ರೀತಿ ಸರಕಾರಕ್ಕೆ ಬರುವ ಕಂದಾಯ (ರಾಜಸ್ವ) ನಿಗದಿಪಡಿಸುವುದೇ ಜಮಾಬಂದಿ. ಆಕಾರ ಬಂದ್ ಶಬ್ದವನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ಆಕಾರ (ಆಕರಣೆ) ಎಂದರೆ ಒಂದು ನಿರ್ದಿಷ್ಟ ಜಮೀನಿನಲ್ಲಿ ಉತ್ಪತ್ತಿಯ ಒಂದಂಶವನ್ನು ಸರ್ಕಾರದ ಪಾಲೆಂದು ನಿಗದಿಪಡಿಸಿ ಹಣದ ರೂಪದಲ್ಲಿ ವಸೂಲು ಮಾಡಬೇಕಾದ ಮೊಬಲಗೆಷ್ಟು ಎಂದು ಹೇಳುವುದು. ಬಂದ್ ಎಂದರೆ ನಿರ್ಧಾರ ಪಡಿಸುವುದು. ಈ ಆಕರಣೆಯೇ ಭೂಕಂದಾಯ. ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಪ್ರತಿ ೩೦ ವರ್ಷಗಳಿಗೊಮ್ಮೆ ಪ್ರತಿಯೊಂದು ಜಮೀನನ್ನು ಅಳತೆ ಮಾಡಿಸಿ ಅದರ ಫಲವತ್ತತೆ, ಉತ್ಪತ್ತಿ ಮಳೆ ಇತ್ಯಾದಿಗಳ ಆಧಾರದ ಮೇಲೆ ಆಕಾರಬಂದ ತಯಾರಿಸಿ ಅದರ ಆಧಾರದ ಮೇಲೆ ಭೂ ಕಂದಾಯ ನಿರ್ಧರಿಸುವರು.

ಭೂ ಕಂದಾಯ ನಿಗದಿಯಾದ ಜಮೀನುಗಳ ಅಧಿಬೋಗದಾರರು ಪ್ರತಿ ಕಂದಾಯ ಸಾಲಿಗೂ ಭೂ ಕಂದಾಯ ಕೊಡಬೇಕಾಗುತ್ತದೆ. ಪ್ರತಿಯೊಂದು ಜಮೀನಿನ ಅಧಿಭೋಗದಾರನು ಪ್ರಸ್ತುತ ಕಂದಾಯ ಸಾಲಿಗೆ ಕೊಡಬೇಕಾದ ಭೂ ಕಂದಾಯವೆಷ್ಟು, ಸೆಸ್ಸುಗಳೆಷ್ಟು ಎಂಬುದನ್ನು ಜಿಲ್ಲಾಧಿಕಾರಿಗಳು ನಿರ್ಧರಿಸುವರು. ಜುಲೈ ೧ನೇ ತಾರೀಖಿನಿಂದ ಜೂನ್ ೩೦ನೇ ತಾರೀಖಿನ ಅವಧಿಗೆ ಕಂದಾಯ ವರ್ಷವೆನ್ನುವರು. ಪ್ರತಿಯೊಂದು ಅಧಿಭೋಗದಾರನ ಲೆಕ್ಕವನ್ನು ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳು ದೃಢೀಕರಿಸಬೇಕಾಗುತ್ತದೆ. ಈ ರೀತಿ ಕಂದಾಯ ಸಾಲಿನ ಲೆಕ್ಕಗಳನ್ನು ದೃಢೀಕರಿಸುವ ಕಾರ್ಯವನ್ನು ವಿಶೇಷಾರ್ಥದಲ್ಲಿ "ಹುಜೂರ ಜಮಾಬಂದಿ" ಎಂದು ಕರೆಯುತ್ತಾರೆ.

ಹುಜೂರ ಜಮಾಬಂದಿಗೆ ಪೂರ್ವಭಾವಿಯಾಗಿ ಮಾಡುವುದೇ ತಾಲೂಕು ಅಥವಾ "ದಿತ್ತಂ ಜಮಾಬಂದಿ" ಇದನ್ನು ಆಯಾ ತಾಲ್ಲೂಕಿನ ತಹಶೀಲದಾರರು ನಡೆಸುತ್ತಾರೆ. ಹುಜೂರ ಜಮಾಬಂದಿ ಡಿಸೆಂಬರ್ ಅಂತ್ಯದ ವೇಳೆಗೆ ಮುಗಿಯಬೇಕಾಗುತ್ತದೆ. ಅಂದರೆ ದಿತ್ತಂ ಜಮಾಬಂದಿಯನ್ನು ಅದಕ್ಕೆ ಒಂದು ತಿಂಗಳ ಪೂರ್ವದಲ್ಲಿಯೇ ಮುಗಿಸಬೇಕು. ತಾಲೂಕುದಿತ್ತಂ ಜಮಾಬಂದಿಯಲ್ಲಿ (೧) ಕಳೆದ ಕಂದಾಯ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸುವರು ಹಾಗೂ (೨) ಪ್ರಸ್ತುತ ಸಾಲಿನ ಕಂದಾಯ ಲೆಕ್ಕಗಳನ್ನು ಸಿದ್ಧಪಡಿಸುವರು.

(ಅ) ಕಳೆದ ಸಾಲಿನ ಲೆಕ್ಕಗಳನ್ನು ಮುಕ್ತಾಯ ಮಾಡುವಾಗ (೧) ರಶೀದಿ ಪುಸ್ತಕ (೨) ಖಿರ್ದಿ ಪುಸ್ತಕ, (೩) ಖಾತೆ (೪) ಕಮ್ ಜಾಸ್ತಿ (ಹೆಚ್ಚು ಕಡಿಮೆ) ಘೋಷವಾರೆ,, (೫) ತಾಲೂಕು ಭೂ ಕಂದಾಯ ಡೇ. ಬುಕ್ಕ (ದೈನಿಕ ವಹಿ) (೬) ತಾಲೂಕು ಭೂ ಕಂದಾಯ ಲೆಡ್ಜರು (ಹೊತ್ತಿಗೆ) (೭) ಡಿ. ಸಿ. ಬಿ. ರಿಜಿಸ್ಟರ್ (೮) ಕುಳ (ಹಿಡುವಳಿದಾರ) ವಾರ ಬಾಕಿ ಪಟ್ಟಿ, (೯) ಇತರೇ ಸರಕಾರಿ ಬಾಕಿಗಳ ಖಾತೆಗಳು ಇವುಗಳನ್ನು ಪರಿಶೀಲಿಸಬೇಕು. (ಬ) ಪ್ರಸ್ತುತ ಸಾಲಿನ ಲೆಕ್ಕಗಳನ್ನು ಸಿದ್ದಪಡಿಸುವಾಗ (೧) ಚಾಲ್ತಿ ಸಾಲಿನ ಖಾತೆ, (೨) ಚಾಲ್ತಿ ಸಾಲಿನ ಖಿರ್ದಿ (೩) ಹಕ್ಕು ದಾಖಲೆ ಆರ್. ಟಿ. ಸಿ. (೪) ಹಕ್ಕು ದಾಖಲೆ ಬದಲಾವಣೆ ರಿಜಿಸ್ಟರ್ (೫) ವಿವಾದಾಸ್ಪದ ಪ್ರಕರಣಗಳ ರಿಜಿಸ್ಟರ್ (೬) ಇನಾಂ ರಿಜಿಸ್ಟರ್ (೭) ಬಂಜರು ಭೂಮಿ ತಖ್ತೆ (೮) ಅತಿಕ್ರಮಣ ಪ್ರಸಂಗಗಳ ರಿಜಿಸ್ಟರ್ (೯) ಕಮ್ ಜಾಸ್ತಿ ಘೋಷವಾರೆ, (೧೦) ಆಕಾರ ಬಂದ, (೧೧) ಚಾಲ್ತಿ ಸಾಲಿನ ಡಿ.ಸಿ.ಬಿ. ರಿಜಿಸ್ಟರ್ (೧೨) ಚಾಲ್ತಿ ಸಾಲಿನ ಕುಳ (ಹಿಡುವಳಿದಾರ) ಬಾಕಿ ಪಟ್ಟಿ (೧೩) ಇತರೇ ಸರ್ಕಾರಿ ಬಾಕಿಗಳ ಖಾತೆಗಳು ಮುಂತಾದವುಗಳನ್ನು ಪರಿಶೀಲಿಸಬೇಕಾಗುತ್ತದೆ. ಮೇಲ್ಕಂಡ ರಿಜಿಸ್ಟರುಗಳಲ್ಲದೆ ಪ್ರತಿಯೊಬ್ಬ ಗ್ರಾಮಲೆಕ್ಕಾಧಿಕಾರಿಯು ಪ್ರತಿಯೊಂದು ಗ್ರಾಮಕ್ಕೆ ಪ್ರತ್ಯೇಕವಾದ ಆದರ್ಶ ತಖ್ತೆ ನಕಾಶೆ, ಟಿಪ್ಪಣಿ ಪುಸ್ತಕ ಗ್ರಾಮ ಲೆಕ್ಕಿಗರ ದಿನಚರಿ, ಮೇಲಧಿಕಾರಿಗಳ ಭೇಟಿ ಪುಸ್ತಕ ಮುಂತಾದವುಗಳನ್ನು ನಿರ್ವಹಿಸಿದ್ದಾರೆಯೇ ಎಂಬುದನ್ನು ನೋಡಬೇಕು. ಜಮಾಬಂದಿಯನ್ನು ಆಯಾ ಕಂದಾಯ ಆಡಳಿತ ಘಟಕದ ಕೇಂದ್ರ ಸ್ಥಾನದಲ್ಲಿ ಮಾಡಬೇಕೆಂಬ ನಿಯಮವಿದೆ.

### ಭೂಕಂದಾಯ ವಸೂಲಿ

ಪ್ರತೀವರ್ಷ ಜನವರಿ ೧ ರಿಂದ ರೈತರಿಂದ ಭೂಕಂದಾಯ ಬಾಕಿ ಇದೆಯೆಂದು ಎಣಿಸಿ ಜನವರಿಯಿಂದ ಜೂನ್ ಕೊನೆಯವರೆಗಿನ ಅವಧಿಯನ್ನು "ಕಿಸ್ತು" ಅಥವಾ "ಮೋಸಂ" ಎಂದು ಕರೆಯಲಾಗುವುದು. ಒಂದು ಖಚಿತ ಕಂತಿಗೆ ಪಾವತಿಯಾಗದ ಮೊತ್ತವು ಬಾಕಿ ಎಂದು ಭಾವಿಸಲ್ಪಟ್ಟು ಬಾಕಿದಾರನು ದೋಷಿ ಎಂದು ಪರಿಗಣಿಸಲ್ಪಡುವನು. ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳ ೨೦ಕ್ಕೆ ಕೊಡಬೇಕಾದ ಒಂದೊಂದು ಕಂತೂ ಸಕಾಲದಲ್ಲಿ

ಪಾವತಿಯಾಗಬೇಕು. ವಸೂಲಾತಿ ಪ್ರಕ್ರಿಯೆಯು ಜನವರಿಯಲ್ಲಿ ರೈತನಿಗೆ ಡಿಮ್ಯಾಂಡ್ ನೋಟೀಸ್ ಅಥವಾ ಬೇಡಿಕೆ ಪತ್ರ ಬಂದಾಗ ಆರಂಭವಾಗಿ ಮುಂದೆ ಸರಿಯಾದ ಅವಧಿಯಲ್ಲಿ ಬಾಕಿ ವಸೂಲಿ ಆಗದಿದ್ದರೆ, ಈ ವಿಚಾರ ಒಂದು ವಾರದೊಳಗೆ ತಹಶೀಲ್ದಾರರ ಗಮನಕ್ಕೆ ತಂದು ಬಾಕಿದಾರನ ಚರ ಆಸ್ತಿಯನ್ನು ಜಪ್ತಿ ಮಾಡಲು ಆಜ್ಞೆ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಭೂಕಂದಾಯ ಅಧಿನಿಯಮ ೧೯೬೬ರಲ್ಲಿ ಹೇಳಿದೆ. ಹೀಗೆ ಜಪ್ತಿ ಆದ ಆಸ್ತಿ ಮಾರಾಟಕ್ಕೆ ಇಡುವ ಮೊದಲು ಜಿಲ್ಲಾಧಿಕಾರಿ ಇಲ್ಲವೆ ಅವರಿಂದ ನೇಮಿಸಲ್ಪಟ್ಟ ಯಾವುದೇ ಅಧಿಕಾರಿ ಈ ಬಗ್ಗೆ ಸೂಕ್ತ ಪ್ರಕಟಣೆ (ನೋಟೀಸು) ಜಾರಿ ಮಾಡಬೇಕು. ಮಾರಾಟದಿಂದ ಬಂದ ಮೊತ್ತ ಬಾಕಿ ಇರುವ ಮೊತ್ತಕ್ಕಿಂತ ಕಡಿಮೆ ಯಾದರೆ ಬಾಕಿದಾರನ ಇನ್ನಷ್ಟು ಆಸ್ತಿ ಜಪ್ತಿ ಮಾಡಬಹುದು. ಎಲ್ಲಾ ರಾಜಸ್ವ, ಎಂದರೆ ನೀರಾವರಿ ದರ ಸೆಸ್ಸುಗಳು, ಶುಲ್ಕಗಳು, ಕಂತುಗಳು, ದಂಡಗಳು ಇವೆಲ್ಲವನ್ನೂ ವಸೂಲಾತಿ ಮಾಡಲು ಕಂದಾಯ ವಸೂಲಾತಿಗೆ ಇರುವ ವಿಧಾನವನ್ನೇ ಅನುಸರಿಸಬೇಕು.

**ಕಂದಾಯ ವಿನಾಯಿತಿ**

ಮಳೆಯ ಪರಿಸ್ಥಿತಿ ಅನುಕೂಲಕರವಿಲ್ಲದಾಗ ಅಥವಾ ಇನ್ನಾವುದೇ ಅನಿರೀಕ್ಷಿತ ವಿಕೋಪ ಕಾಣಿಸಿಕೊಂಡಾಗ, ಬೆಳೆಗೆ ಹಾನಿಯಾದಲ್ಲಿ ಸರಕಾರವು ಈ ಬಗ್ಗೆ ಗಮನಹರಿಸಿ ಕಂದಾಯದ ಭಾರವನ್ನು ಇಳಿಸುವ ಅಥವಾ ಕಡಿಮೆ ಮಾಡುವ ನಿಲುವನ್ನು ಸದಾ ಹೊಂದಿದೆ. ಮಳೆಯ ಅಭಾವ ತಲೆದೋರಿದಾಗ ಜಿಲ್ಲಾಧಿಕಾರಿಯು ಎಲ್ಲಾ ಅಂತಹ ಪರಿಸ್ಥಿತಿ ಇರುವ ಹೋಬಳಿ (ರೆವಿನ್ಯೂ ಸರ್ಕಲ್)ಗಳಲ್ಲಿ ಕಟಾವು ನಡೆಸಿ ಬೆಳೆಯ ಪರಿಸ್ಥಿತಿಯನ್ನು ತಿಳಿಯಲು ಪ್ರಯೋಗಾತ್ಮಕ ಕ್ರಮಗಳನ್ನು ಕೈಗೊಳ್ಳಲು ಆದೇಶ ನೀಡುತ್ತಾನೆ. ಇನ್ನಾವ ಕಾರಣದಿಂದ ಬೆಳೆಗೆ ಹಾನಿಯಾದಾಗಲೂ ಇದೇ ರೀತಿ ಸರ್ವೇಕ್ಷಣೆ ಮಾಡಲಾಗುತ್ತದೆ. ತಹಶೀಲದಾರರು ಇಂಥ ಪರಿಸ್ಥಿತಿ ಇರುವ ಕನಿಷ್ಠ ಶೇಕಡಾ ಐದು ಗ್ರಾಮಗಳಲ್ಲಿ ಕಟಾವಿನ ಪ್ರಯೋಗ ನಡೆಸಿ ಬೆಳೆಯು ಎಕರೆಗೆ ಇಷ್ಟು ಎಂದು ಆಣೆವಾರಿ ಅಂದಾಜು ಮಾಡಬೇಕು. ಕಂದಾಯ ಅಧೀಕ್ಷಕರು ಇಂಥ ಶೇಕಡಾ ೨೦ ಗ್ರಾಮಗಳಲ್ಲಿ ಇಂಥ ಪ್ರಾಯೋಗಿಕ ಕಟಾವು ಮಾಡಿ ಎಕರೆವಾರು ಅಂದಾಜು ಮಾಡಬೇಕು. ಗ್ರಾಮಲೆಕ್ಕಿಗರು ತಮ್ಮ ಕಕ್ಷೆಯಲ್ಲಿ ಬರುವ ಎಲ್ಲ ಗ್ರಾಮಗಳಲ್ಲಿ ಇಂಥ ಅಂದಾಜು ಮಾಡಿ ವರದಿ ಮಾಡಬೇಕು. ಆದರೆ ತಹಶೀಲ್ದಾರರು, ಕಂದಾಯ ನಿರೀಕ್ಷಕರೂ ಕಟಾವು ಮಾಡಿ ನೋಡಿದ್ದ ಗ್ರಾಮಗಳನ್ನು ಗ್ರಾಮಲೆಕ್ಕಿಗರು ಹೊರತುಪಡಿಸಿಬೇಕು. ಕಂದಾಯ ವಸೂಲಿ ತಹಕೂಬ (ನಿಲುಗಡೆ) ಅಥವಾ ವಿನಾಯಿತಿಯನ್ನು ಕರ್ನಾಟಕ ಕಂದಾಯ ನಿಯಮದ ಉಪನಿಯಮ (೧) ರಂತೆ ಬಾವಿಯಿಂದ ಕರೆಯಿಂದ ನದಿಯಿಂದ ಹಾಗೂ ಅನ್ಯ ಮೂಲಗಳಿಂದ ನೀರಾವರಿ ಸವಲತ್ತು ಹೊಂದಿರುವ ಭೂಮಿಗಳನ್ನು ವರ್ಗೀಕರಿಸಿ ಪ್ರತೀ ಪ್ರಮಾಣವು ಶೇಕಡಾ ೨೫ ಕ್ಕಿಂತ ಕಡಿಮೆ ಇಲ್ಲದೆ ಹಾಗೂ ಶೇಕಡಾ ೩೭ಕ್ಕೆ ಹೆಚ್ಚಿಲ್ಲದಿದ್ದರೆ ವಸೂಲಾತಿಯನ್ನು ಪೂರ್ತಿ ತಹಕೂಬ ಮಾಡಲಾಗುವುದು. ಬೆಳೆಯ ಪ್ರಮಾಣ ೩೭ಕ್ಕಿಂತ ಹೆಚ್ಚು ೫೦ ಕ್ಕಿಂತ ಕಡಿಮೆ ಇದ್ದರೆ ಅರ್ಧ ವಸೂಲಾತಿಯನ್ನು ತಹಕೂಬ ಮಾಡಲಾಗುವುದು. ಬಾಕಿ ವಸೂಲಿ ಹೀಗೆ ನಡೆಯುತ್ತದೆ. ತಹಕೂಬ ಮಾಡಿ ಬಾಕಿ ಇರುವ ಭೂಕಂದಾಯದ ಮೊತ್ತವನ್ನು ಯಾವುದೇ ವರ್ಷ ಬೆಳೆಯ ಪ್ರಮಾಣ ಶೇಕಡಾ ೭೫ಕ್ಕಿಂತ ಹೆಚ್ಚು ಬಂದಾಗ ಒಂದು ವರ್ಷದ ಪೂರ್ತಿ ಬಾಕಿ, ಬೆಳೆಯ ಶೇ. ೭೫ಕ್ಕಿಂತ ಕಡಿಮೆ ಆದರೆ, ೬೭ಕ್ಕಿಂತ ಹೆಚ್ಚಾಗಿದ್ದರೆ, ಒಂದು ವರ್ಷದ ಬಾಕಿಯ ಶೇ. ೬೨ ರಷ್ಟು ಬೆಳೆಯ ಪ್ರಮಾಣ ಶೇ ೬೨ಕ್ಕಿಂತ ಕಡಿಮೆಯಾದರೆ ತಹಕೂಬಾದ ಬಾಕಿ ಕಂದಾಯವನ್ನು ವಸೂಲಿ ಮಾಡಲಾಗುವುದಿಲ್ಲ, ಒಂದು ಖಚಿತ ಅವಧಿಯಲ್ಲಿ ಸಂಗ್ರಹವಾಗಬೇಕಾದ ಕಂದಾಯದ ಬಾಕಿಯ ಶೇಕಡಾ ೩೭ಕ್ಕಿಂತ ಕಡಿಮೆ ಬೆಳೆ ಬಂದ ಪರಿಸ್ಥಿತಿಯಲ್ಲಿ ವಸೂಲಾತಿ ಆಗದಿರಲಾಗಿ, ಮೂರನೇಯ ವರ್ಷದಲ್ಲಿ ಬಾಕಿಯನ್ನು ಮನ್ನಾ ಮಾಡಲಾಗುವುದು.

**ವೃತ್ತಿ ತೆರಿಗೆ**

ವೃತ್ತಿ ತೆರಿಗೆಯು ಬಹು ಹಿಂದಿನಿಂದಲೂ ರೂಢಿಯಲ್ಲಿ ಇರುವುದು. ಕಾಲಕಾಲಕ್ಕೆ ವೃತ್ತಿ ತೆರಿಗೆಯ ಕಕ್ಷೆಯಲ್ಲಿ ಬರುವ ವೃತ್ತಿ ಕಸಬುಗಳು ಹೆಚ್ಚುತ್ತಾ ಹೋಗಿರವುವು. ೧೯೭೬ಕ್ಕೂ ಮೊದಲು ಉದ್ಯೋಗ, ವೃತ್ತಿ ಮತ್ತು ಕಸಬುಗಳ ಮೇಲೆ ತೆರಿಗೆಯನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಮಾತ್ರ ಸಂಗ್ರಹಿಸುತ್ತಿದ್ದವು. ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರ ಪ್ರಕಾರ ವೃತ್ತಿ ತೆರಿಗೆ ವಸೂಲಿಗೆ ವೃತ್ತಿದಾರರನ್ನು ಒಂಬತ್ತು ಗುಂಪುಗಳಾಗಿ ವಿಭಜಿಸಲಾಗಿತ್ತು. ಆದರೆ ಉದ್ಯೋಗ, ವ್ಯಾಪಾರ ಮತ್ತು ವೃತ್ತಿಗಳ ಅಧಿನಿಯಮ ೧೯೭೬ರಂತೆ ಉದ್ಯೋಗ, ವ್ಯಾಪಾರ, ವೃತ್ತಿ ಮತ್ತು ನೌಕರಿಗಳ ಮೇಲೆ ತೆರಿಗೆಯನ್ನು ೧ ಏಪ್ರಿಲ್ ೧೯೭೬ರಿಂದ ಜಾರಿ ಮಾಡಲಾಯಿತು. ವೇತನ ಪಡೆಯುವ ನೌಕರರ ತೆರಿಗೆ ದರ ಅವರ

ವೇತನದ ಪ್ರಮಾಣದ ಮೇಲೆ ಅವಲಂಬಿಸಿವೆ. ವ್ಯಾಪಾರಿಯ ವಿಚಾರದಲ್ಲಿ ವಹಿವಾಟು (ಟರ್ನ್ ಓವರ)ನ ಪ್ರಮಾಣವನ್ನು ತೆರಿಗೆ ನಿರ್ಣಯದಲ್ಲಿ ಪರಿಗಣಿಸಲಾಗುತ್ತಿದೆ. ನೌಕರರ ವೃತ್ತಿ ತೆರಿಗೆಯನ್ನು ಪ್ರತೀ ತಿಂಗಳು ಅವರ ಸಂಬಳದಲ್ಲಿ ಮುರಿದುಕೊಳ್ಳುವ ಏರ್ಪಾಡಿದೆ. ಸ್ವಉದ್ಯೋಗಿಗಳು ಆಯಾ ವರ್ಷ ಸೆಪ್ಟೆಂಬರ್ ೩೦ಕ್ಕೆ ಮೊದಲು ತೆರಿಗೆ ಪಾವತಿ ಮಾಡಬೇಕು.

ಏಪ್ರಿಲ್ ಒಂದು ೧೯೮೩ರಿಂದ ತಿಂಗಳಿಗೆ ರೂ. ೧,೨೦೦ ಮೂಲ ವೇತನ ಅಥವಾ ಕೂಲಿ ಪಡೆಯುವವರು ಹಾಗೂ ಅದಕ್ಕೆ ಮೇಲ್ಪಟ್ಟ ಆದಾಯ ಉಳ್ಳವರಿಗೆ ತೆರಿಗೆ ಬೀಳುತ್ತದೆ. ಸ್ವಯಂ ಉದ್ಯೋಗಿಗಳು ತಮಗೆ ಗೊತ್ತುಪಡಿಸಿದ ತೆರಿಗೆಯನ್ನು ಪ್ರತಿ ವರ್ಷ ಏಪ್ರಿಲ್ ೩೦ಕ್ಕೆ ಮೊದಲು ಪಾವತಿ ಮಾಡಬೇಕು.

ಕರ್ನಾಟಕ ಮಾರಾಟಕರ ಅಧಿನಿಯಮ ೧೯೫೭ರಂತೆ ನೋಂದಾಯಿಸಿದ ವ್ಯಾಪಾರಿಗಳು ವಾರ್ಷಿಕ ವಿಕ್ರಯ ೨೫,೦೦೦ಕ್ಕೆ ಮೇಲ್ಪಟ್ಟು ಮತ್ತು ರೂ. ೫೦,೦೦೦ಕ್ಕೆ ಕಡಿಮೆ ಇರುವವರು ವರ್ಷಕ್ಕೆ ರೂ. ೧೦೦ ರಂತೆ ೫೦,೦೦೦ ರೂನಿಂದ ಮೇಲ್ಪಟ್ಟು ೧ ಲಕ್ಷ ರೂ. ವರೆಗೆ ವಿಕ್ರಯವಿರುವವರು ವರ್ಷಕ್ಕೆ ರೂ. ೨೫೦ರಂತೆ ತೆರಿಗೆ ಕೊಡಬೇಕು. ಆಗಸ್ಟ್ ಒಂದು, ೧೯೮೫ರಿಂದ ವಾರ್ಷಿಕ ವಿಕ್ರಯ ೭೫,೦೦೦ಕ್ಕೂ ಮೇಲ್ಪಟ್ಟು ಇರುವ ವ್ಯಾಪಾರಿಗಳು ರೂ. ೨೫೦ ವಾರ್ಷಿಕ ತೆರಿಗೆ ಪಾವತಿ ಮಾಡಬೇಕು. ಈ ವೃತ್ತಿತೆರಿಗೆಯನ್ನು ಸರ್ಕಾರ ಆಗಾಗ್ಗೆ ಪರಿಷ್ಕರಿಸುತ್ತಿರುತ್ತದೆ. ೧೯೯೭ರಲ್ಲಿ ಈ ತೆರಿಗೆಯು ವೇತನ ಪಡೆಯುವವರಿಗೆ ಕನಿಷ್ಟ ೧೦ ರೂ., ಗರಿಷ್ಠ ೧೦೫ ರೂ. ಇದ್ದು, ವೇತನ ಪಡೆದಿರುವ ವೃತ್ತಿ ನಿರತರಿಗೆ ಗರಿಷ್ಠ ೨೦೦ ರೂ. ಇದೆ.

## ಪ್ರವೇಶ ತೆರಿಗೆ

ಪುರಸಭೆಗಳ ಪರಂಪರಾಗತ ಆದಾಯವಾದ ಆಕ್ಟ್ರಾಯ್ (ಜಕಾತಿ)ಯನ್ನು ಪುರದ ಗಡಿಯೊಳಗೆ ಬರುವ ಸರಕುಗಳ ಮೇಲೆ ಹೇರಲಾಗುತ್ತಿತ್ತು. ಆದರೆ ವ್ಯಾಪಾರಿಗಳಿಗೂ ಸಾರಿಗೆ ಉದ್ದಿಮೆಯವರಿಗೂ ಇದು ಕಿರಿಕಿರಿಯ ಸಂಗತಿ ಎನಿಸಿ ಅವರು ಅದನ್ನು ವಿರೋಧಿಸಿದ್ದರಿಂದ ೧ ಏಪ್ರಿಲ್ ೧೯೭೯ರಿಂದ ಇದನ್ನು ರದ್ದುಪಡಿಸಿ ಮುಂದೆ ಕರ್ನಾಟಕ ಸರಕಾರವು ಸರಕುಗಳ ಪ್ರವೇಶ ತೆರಿಗೆ (ಕರ್ನಾಟಕ ಟ್ಯಾಕ್ಸ್ ಅನ್ ಎಂಟ್ರಿ ಆಫ್ ಗೂಡ್ಸ್)ಯನ್ನು ಜಾರಿಗೆ ತಂದಿತು. ಆಕ್ಟ್ರಾಯ ನಿಲ್ಲಿಸಿದ್ದರಿಂದ ಆದ ನಷ್ಟವನ್ನು ತುಂಬಲು ಇದನ್ನು ಜಾರಿ ಮಾಡಿದರು. ಇದು ಮಾರಾಟ ತೆರಿಗೆಯ ಮೇಲೆ ಶೇ. ೧೦ ರಷ್ಟು ಸರ್‌ಚಾರ್ಜ್ ರೂಪದಲ್ಲಿ ಇದ್ದು, ಬಟ್ಟೆ ಸಕ್ಕರೆ, ತಂಬಾಕು ಮುಂತಾದ ಮಾರಾಟ ಕರಕ್ಕೆ ಒಳಪಡದ ವಸ್ತುಗಳ ಮೇಲೂ ಹೇರಲ್ಪಟ್ಟಿದೆ. ಇಂಥ ವಸ್ತುಗಳ ಮೇಲೆ ಆಕರಣೆಯು ಶೇ. ೧ ರಿಂದ ೨. ಈ ತೆರಿಗೆಯ ವಸೂಲಿಯನ್ನು ೧ ಜೂನ್ ೧೯೭೯ರಿಂದ ಜಾರಿಯಾಯಿತು. ಸಕ್ಕರೆ, ತಂಬಾಕು ಮುಂತಾದ ೧೩ ಸರಕುಗಳ ಮೇಲೆ ೧೯೮೨-೮೩ರಿಂದ ಈ ತೆರಿಗೆ ಅಕರಿಸಿ ಅವುಗಳ ಉತ್ಪಾದನೆಯ ಮೇಲೂ ಹೆಚ್ಚಿನ ದರದ ತೆರಿಗೆ ಅಕರಿಸಲಾಯಿತು. ಸಂಗ್ರಹವಾದ ಹಣದಲ್ಲಿ ಶೇ. ೧೦ನ್ನು ರಾಜ್ಯ ಸರ್ಕಾರವು ಸಂಗ್ರಹಣಾ ವೆಚ್ಚವೆಂದು ತಾನೇ ಇಟ್ಟುಕೊಂಡು ಉಳಿದ ಶೇ ೯೦ ಭಾಗವನ್ನು ಸ್ಥಳೀಯ ಸಂಸ್ಥೆಗಳಿಗೆ ವಿತರಣೆ ಮಾಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಸಂಗ್ರಹವಾದ ಮೊತ್ತವನ್ನು ಅಧ್ಯಾಯದ ಕೊನೆಯಲ್ಲಿ ಕೋಷ್ಟಕದಲ್ಲಿ ಕೊಟ್ಟಿದೆ.

## ಐಷಾರಾಮ ತೆರಿಗೆ

ಕರ್ನಾಟಕ ಐಷಾರಾಮ (ಲಗ್ಜರಿ ಹೋಟೇಲು ಮತ್ತು ವಸತಿ ಗೃಹ) ಅಧಿನಿಯಮವು ೧ ಜೂನ್ ೧೯೭೯ರಿಂದ ಜಾರಿಗೆ ಬಂತು. ದಿನಕ್ಕೆ ರೂ. ೫೦ ಕ್ಕಿಂತ ಹೆಚ್ಚು ಹಾಗೂ ೧೫೦ ಕ್ಕಿಂತ ಕಡಿಮೆ ಬಾಡಿಗೆಯನ್ನು ಹೋಟೆಲ್ ವಸತಿಗಾಗಿ ನೀಡುವ ಪ್ರಸಂಗದಲ್ಲಿ ಶೇ. ೧೦ ಐಷರಾಮ (ಲಗ್ಜರಿ) ತೆರಿಗೆ, ರೂ. ೧೫೦ ರಿಂದ ೨೫೦ ರವರೆಗೆ ಬಾಡಿಗೆಗೆ ಶೇ. ೨೫, ೨೫೦ಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ಶೇ ೨೦ ತೆರಿಗೆ ನೀಡಬೇಕು. ಕರ್ನಾಟಕ ವಾಣಿಜ್ಯ ತೆರಿಗೆ ಅದಿನಿಯಮದಂತೆ ನೋಂದಾಯಿಸಲ್ಪಟ್ಟ ಹೋಟೆಲು ಅಥವಾ ವಸತಿಗೃಹದ ಮಾಲೀಕರು ನೋಂದಣಿ ಮತ್ತು ನವೀಕರಣಕ್ಕೆ ತೆರಿಗೆ ಕೊಡಬೇಕಾಗಿಲ್ಲ.

## ಅರಣ್ಯ ಅಭಿವೃದ್ಧಿ ತೆರಿಗೆ

ಅರಣ್ಯಗಳು ಮಹತ್ವದ ರಾಷ್ಟ್ರೀಯ ಆಸ್ತಿಯಾಗಿದ್ದು ಅವುಗಳು ಪ್ರಗತಿ ಪರವಾಗಿ ಮತ್ತು ನಿರಂತರವಾಗಿ ಆದಾಯ ನೀಡುವ ಸೂತ್ರದಂತೆ ನಿರ್ವಹಿಸಲ್ಪಡುತ್ತಿವೆ. ಅರಣ್ಯ ಕ್ಷೇತ್ರದಲ್ಲಿ ಸತತವಾಗಿ ಹೂಡಿಕೆಯಾಗಲು ನೆರವಾಗುವಂತೆ ಅರಣ್ಯ

ಅಭಿವೃದ್ಧಿ ತೆರಿಗೆಯನ್ನು ರಾಜ್ಯ ಸರಕಾರವು ೧೯೭೫ ಜನವರಿಯಿಂದ ಆಕರಿಸುತ್ತಿದೆ. ಅರಣ್ಯ ಅಭಿವೃದ್ಧಿ ಅಧಿನಿಯಮ ೧೯೭೫ ಈ ತೆರಿಗೆ ಮೊದಲು ಶೇ. ೫ ಇದ್ದುದು ಮುಂದೆ ೧ ಮೇ, ೧೯೮೦ರಿಂದ ಶೇ. ೮ ಆಯಿತು. ಭಾರೀ ಕೈಗಾರಿಕೆಯವರುಬಳಸುವ ಮರಮುಟ್ಟು, ಬಿದಿರುಗಳ ಮೇಲೆ ಮಾತ್ರ ಶೇ. ೧೨ ತೆರಿಗೆ ಹಾಕುತ್ತಾರೆ. ಅರಣ್ಯೋತ್ಪನ್ನಗಳಾದ ಚೌಬೀನೆ (ಮರಮುಟ್ಟು) ಸೌದೆ (ಉರುವಲು ಕಟ್ಟಿಗೆ) ಇದ್ದಿಲು ಮುಂತಾದವುಗಳು ಹಾಗೂ ಕಿರು ಉತ್ಪನ್ನಗಳಾದ ಶ್ರೀಗಂಧ (ಚಂದನ) ಬಿದಿರು, ಬೆತ್ತ ಇವುಗಳನ್ನು ರಾಜ್ಯ ಸರಕಾರವು ಲೀಲಾವು (ಹರಾಜು) ಇಲ್ಲವೆ ಇತರ ಕ್ರಮಗಳಿಂದ ಮಾರಾಟ ಮಾಡಿದಾಗ ಖರೀದಿ ಬೆಲೆಯ ಮೇಲೆ ಈ ತೆರಿಗೆಯನ್ನು ಆಕರಿಸಲಾಗುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಜಿಲ್ಲೆಯಲ್ಲಿ ಸಂಗ್ರವಾದ ಅರಣ್ಯ ಅಭಿವೃದ್ಧಿ ತೆರಿಗೆಯ ಮಾಹಿತಿಯನ್ನು ಅಧ್ಯಾಯದ ಕೊನೆಯಲ್ಲಿ ಪ್ರತ್ಯೇಕ ಕೋಷ್ಟಕದಲ್ಲಿ ಕೊಟ್ಟಿದೆ.

## ಕೇಂದ್ರ ಅಬಕಾರಿ ಶುಲ್ಕ

ಒಂದು ಸಾಮಾನ್ಯ. ಪ್ರವೇಶ (ಕಸ್ಟಮ್ಸ್) ಅಥವಾ ಉತ್ಪಾದನಾ ಸುಂಕವಾಗಿ (ಎಕ್ಸೈಜ್) ಅಬಕಾರಿ ಶುಲ್ಕ ಮೊದಲು ಅಕರಿಸಲ್ಪಟ್ಟಿತ್ತು. ಮುಂದೆ ಬಳಕೆದಾರನು ಪ್ರತೀ ವಸ್ತುವಿಗೆ ಕೊಡುವ ಬೆಲೆಗೆ ಸುಂಕವನ್ನು ಹೇರಲಾಯಿತು. ೧೮೯೪ರಲ್ಲಿ ದೇಶದಲ್ಲಿ ತಯಾರಾದ ಹತ್ತಿ ನೂಲಿನ ಮೇಲೆ ಕೇಂದ್ರ ಸರಕಾರವು ಇದನ್ನು ಮೊದಲು ವಿಧಿಸಿತು. ಮುಂದೆ ನವಿರು ಬಟ್ಟೆಯ ಮೇಲೂ ೧೮೯೬ರಿಂದ ಇದನ್ನು ಆಕರಿಸಲಾಯಿತು. ೧೯೧೭ರಿಂದ ಮೋಟಾರ್ ಎಣ್ಣೆ (ಪೆಟ್ರೋಲು), ೧೯೨೨ರಿಂದ ಸೀಮೆ ಎಣ್ಣೆ (ಚಿಮಣಿ ಎಣ್ಣೆ) ಮತ್ತು ೧೯೩೦ ರಿಂದ ಬೆಳ್ಳಿಯ ಮೇಲೆ ಇದನ್ನು ಹೇರಲಾಯಿತು. ೧೯೩೪ರಲ್ಲಿ ಅಬಕಾರಿ ಸುಂಕದ ಆಕರಣೆಯನ್ನು ತರ್ಕಬದ್ಧತೆಗೆ ಒಳಪಡದೆ ಸಕ್ಕರೆ, ಬೆಂಕಿಪೆಟ್ಟಿಗೆ, ಉಕ್ಕಿನ ಗಟ್ಟಿಗಳು ಮುಂತಾದವುಗಳನ್ನು ಈ ಸುಂಕಕ್ಕೆ ಒಳಪಡಿಸಲಾಯಿತು. ಈಗ ೧೩೬ ವಸ್ತುಗಳು ಈ ಸುಂಕಕ್ಕೆ ಒಳಪಟ್ಟಿದೆ. ಕೇಂದ್ರದ ಅಬಕಾರಿ ಮತ್ತು ಉಪ್ಪಿನ ಅಧಿನಿಯಮ ೧೯೪೪ರಂತೆ ಈಗ ಕೇಂದ್ರ ಅಬಕಾರಿ (ಸೆಂಟ್ರಲ್ ಎಕ್ಸೈಸ್) ಇಲಾಖೆಯು ಈ ಕೆಳಗಿನ ಕಾನೂನುಗಳನ್ನು ಕಾರ್ಯಾಚರಣೆಗೆ ತರುತ್ತದೆ. (೧) ಸುವರ್ಣ ನಿಯಂತ್ರಣ ಅಧಿನಿಯಮ (೧೯೬೮), (೨) ಕಸ್ಟಮ್ಸ್ ಕಾನೂನು ೧೯೬೮, (೩) ವಿದೇಶ ವಿನಿಮಯ ನಿಯಂತ್ರಣ ಅಧಿನಿಯಮ ೧೯೪೭ (ಫೆರಾ) (೪) ರಫ್ತು ಮತ್ತು ಆಮದು ನಿಯಂತ್ರಣ ಕಾನೂನು ೧೯೫೫, (೫) ಸಕ್ಕರೆ ನಿರ್ಯಾತ ಉದ್ದೀಪನ ಅಧಿ ನಿಯಮ ೧೯೫೮, (೬) ಗಣಿ ಉತ್ಪನ್ನಗಳ (ಹೆಚ್ಚುವರಿ ಸುಂಕ ಮತ್ತು ಅಬಕಾರಿ)ಗಳ ಅಧಿನಿಯಮ ೧೯೫೮, (೭) ಖಾದಿ ಮತ್ತು ಕೈಮಗ್ಗಗಳ ಬಟ್ಟೆಗಳ ಅಭಿವೃದ್ಧಿ ಹೆಚ್ಚುವರಿ ಅಬಕಾರಿ ಸುಂಕದ ಕಾನೂನು ೧೯೫೩, (೮) ಉತ್ಪನ್ನ ಉಪತೆರಿಗೆ (ಸೆಸ್) ಕಾನೂನು ೧೯೬೬, (೯) ಸುಂಕದ (ಹೆಚ್ಚುವರಿ ಅಬಕಾರಿ) ಕಾನೂನು ೧೯೫೭ (೧೦) ಹೆಚ್ಚುವರಿ ಅಬಕಾರಿ (ವಿಶೇಷ ಮಹತ್ವದ ಸರಕುಗಳ) ಕಾನೂನು ೧೯೫೭ ಮತ್ತು (೧೧) ವಿದೇಶ ವಿನಿಮಯ ಸಂಚಯನ ಮತ್ತು ಕಳ್ಳಸಾಗಣೆ ತಡೆ ಕಾನೂನು (ಕಾಫೆಪೊಸ)

## ಆದಾಯ ತೆರಿಗೆ

೧೮೫೭-೫೮ರ ಪ್ರಥಮ ಸ್ವಾತಂತ್ರ್ಯಹೋರಾಟ ವಿಫಲವಾದರೂ ಬ್ರಿಟಿಷ ಸರಕಾರವು ಅನೇಕ ಆರ್ಥಿಕ ತೊಂದರೆಗಳನ್ನು ಎದುರಿಸಬೇಕಾಗಿ ಬಂದು ವ್ಯಕ್ತಿಗಳ ಆದಾಯದ ಮೇಲೆ ಕರಹೇರುವ ನಿರ್ಣಯವನ್ನು ಭಾರತ ಸರ್ಕಾರ ಕೈಗೊಂಡಿತು. ಆಗ ಭಾರತೀಯ ಆದಾಯ ಅಥವಾ ವರಮಾನ ತೆರಿಗೆ (ಇನ್‌ಕಂ ಟ್ಯಾಕ್ಸ್) ಕಾನೂನು ಜಾರಿಗೆ ಬಂದು ಹಲವು ಪ್ರಯೋಗಗಳ ನಂತರ ೧೮೮೬ರಲ್ಲಿ ಈ ಕಾನೂನನ್ನು ಖಾಯಂ ಮಾಡಿದರು. ಪ್ರಥಮ ಮಹಾಯುದ್ಧ ಕಾಲದಲ್ಲಿ ಉಂಟಾದ ಆರ್ಥಿಕ ನಷ್ಟವನ್ನು ತುಂಬಲು ಇನ್ನೂ ವ್ಯಾಪಕವಾದ ಇಂಡಿಯನ್ ಇನ್ಕ್ಂ ಟ್ಯಾಕ್ಸ ಆಕ್ಟ್ ೧೯೨೨ನ್ನು ಜಾರಿಗೊಳಿಸಲಾಯಿತು. ಸ್ವಾತಂತ್ರ್ಯನಂತರ ಸರ್ಕಾರದ ಆರ್ಥಿಕ ನೀತಿಗಳ ಅನುಷ್ಠಾನಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಕಂಡು ಬಂದು ಮಹಾವೀರ ತ್ಯಾಗಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದ ಪ್ರತ್ಯಕ್ಷ ತೆರಿಗೆಗಳ ನಿರ್ವಹಣೆಯ ವಿಚಾರಣಾ ಸಮಿತಿ ಹಾಗೂ ಕಾನೂನು ಆಯೋಗ (ಲಾ ಕಮಿಷನ್) ಇವುಗಳ ವರದಿಗನುಗುಣವಾಗಿ ೧೯೬೧ರ ಆದಾಯ ತೆರಿಗೆ ಮಸೂದೆ ಮಂಜೂರಾತಿ ೧ ಏಪ್ರಿಲ್ ೧೯೬೭ರಿಂದ ಅದು ಅಚರಣೆಗೆ ಬಂತು. (ಇದು ೧೯೨೨ರ ಕಾನೂನಿಗೆ ಪ್ರತಿಯಾಗಿ ಬಂದುದು) ಇದರ ಜೊತೆ ಭಕ್ಷೀಸು ತೆರಿಗೆ (ಗಿಫ್ಟ್‌ಟ್ಯಾಕ್ಸ) ಅಧಿನಿಯಮ ಕೂಡ ಜಾರಿಗೆ ಬಂದಿತು.

## ತುಂಡು ಹಿಡುವಳಿಗಳ ಒಗ್ಗೂಡಿಕೆ

ಆಸ್ತಿ ಪಾಲುಗಾರಿಕೆ ಹಾಗೂ ಆರ್ಥಿಕ ಅವಶ್ಯಕತೆ ಮುಂತಾದ ಕಾರಣಗಳಿಂದ ಕೃಷಿ ಭೂಮಿಗಳು ಮಿತಿಮೀರಿ ವಿಭಜಿತವಾಗಿ ಕೃಷಿ ಉತ್ಪನ್ನಕ್ಕೆ ಹಾನಿಯಾಗುವುದನ್ನು ತಪ್ಪಿಸಲು ಹಾಗೂ ತುಂಡು ಹಿಡುವಳಿಗಳ ಒಗ್ಗೂಡಿಕೆಯನ್ನು ಸಾಧಿಸಲು ಕರ್ನಾಟಕ ಭೂ ಹಿಡುವಳಿಗಳು ತಡೆಯುವ ಮತ್ತು ಒಗ್ಗೂಡಿಸುವ ಅಧಿನಿಯಮ ೧೯೬೪ ಸ್ವೀಕೃತವಾಯಿತು. ಈ ಕಾನೂನಿನ ಫಲಿತಾಂಶವಾಗಿ ಸೂಕ್ತ ಪ್ರಮಾಣಿತ ಪ್ರದೇಶ ಈ ಕಾನೂನಿನ ಪ್ರಕರಣ (೩)ರಲ್ಲಿ ಹೇಳಿರುವಂತೆ ಕಡಿಮೆ ಗಾತ್ರದ ಹಿಡುವಳಿಯು ಲಾಭಕರವಲ್ಲ ಎಂದು ಕಂಡು ಬಂದರೆ ಅದನ್ನು ತುಂಡು ಭೂಮಿಯೆಂದು ಪರಿಗಣಿಸಲಾಗುವುದು. ಭೂಮಿಗಳ ವರ್ಗೀಕರಣಕ್ಕೆ ಅನುಗುಣವಾಗಿ ಪ್ರಮಾಣಿತ ಕನಿಷ್ಟ ಭೂಮಿ ಅರ್ಧ ಎಕರೆಯಿಂದ ೪ ನಾಲ್ಕು ಎಕರೆಯವರೆಗೆ ಇರುವುದು ಕೃಷಿಯಿಂದ ಲಾಭಕರವಲ್ಲದ ಯಾವುದೇ ಭೂಮಿಯ ಘಟಕವನ್ನು ತುಂಡು ಹಿಡುವಳಿಯೆಂದು ಪರಿಗಣಿಸಲಾಗುವುದು. ಈ ಭೂಮಿಗೆ ತಗಲಿಕೊಂಡಿರುವ ಭೂಮಿ ಉಳ್ಳವನಿಗೆ ವಿನಹ ಬೇರೆ ಯಾರಿಗೂ ಭೂಮಿಯನ್ನು ಅದರ ಮಾಲೀಕನು ಮಾರಲಾಗದು. ಅಲ್ಲದೆ ಈಗಿರುವ ತುಂಡು ಭೂಮಿಗಳ ಒಗ್ಗೂಡಿಸುವಿಕೆ (ಕನ್ಸಾಲಿಡೇಶನ್)ಯಲ್ಲಿ ಭೂಮಿಯನ್ನು ಬಿಟ್ಟು ಕೊಡುವ ಮಾಲೀಕನಿಗೆ ಪರಿಹಾರ ನೀಡಲು ಅವಕಾಶವಿದೆ. ಇಂತಹ ಭೂಮಿ ಪಡೆಯುವುದು ಒಂದು ವರ್ಗಾವಣೆಯ ಪ್ರಮಾಣ ಪತ್ರವನ್ನು ಪಡೆಯುತ್ತಾನೆ. ಇದಕ್ಕೆ ನೋಂದಾಣಿ ವೆಚ್ಚ ಅಥವಾ ಛಾಪಾ ಕಾಗದ ವೆಚ್ಚ (ಸ್ಟಾಂಪ ಡ್ಯೂಟಿ) ಇರುವುದಿಲ್ಲ. ಇತ್ತೀಚೆಗೆ ಈ ಕಾನೂನನ್ನು ಸಡಿಲಗೊಳಿಸಲಾಗಿದೆ.

## ಭೂ ಸುಧಾರಣೆ

ಕರ್ನಾಟಕ ಭೂಸುಧಾರಣೆ ಅಧಿನಿಯಮವು 'ಉಳುವವನಿಗೆ ಜಮೀನು' ಎಂಬ ಮಾತನ್ನು ನಿಜಗೊಳಿಸುವ ದಿಸೆಯಲ್ಲಿನ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಕೃಷಿ ಭೂಮಿ ಸುಧಾರಣೆಯಲ್ಲಿ ಇದು ಒಂದು ಕ್ರಾಂತಿ ಕಾರಿ ಕ್ರಮವೆಂದು ಹೇಳಬಹುದು. ಪ್ರತಿ ಕುಟುಂಬಕ್ಕೂ ಸ್ವಂತಕ್ಕೆ ಇರಬೇಕಾದ ಜಮೀನಿನ ವಿಸ್ತೀರ್ಣಕ್ಕೆ ಎಂದು ಮಿತಿಯನ್ನು ಇದು ವಿವರಿಸಿದೆ. ಕುಟುಂಬದ ಅರ್ಥ ವ್ಯಾಖ್ಯೆಯನ್ನು ಅದರ ಜನಸಂಖ್ಯೆಯನ್ನು ಕಡಿಮೆಗೊಳಿಸಿ ಹೊಸದಾಗಿ ವಿವರಿಸಲಾಗಿದೆ. ಕೃಷಿಯೇತರ ವೃತ್ತಿಯಿಂದ ವಾರ್ಷಿಕ ಆದಾಯ ೧೨,೦೦೦ ರೂಗಳಿಗೂ ಮೀರಿದ ವ್ಯಕ್ತಿಗಳು, ಕಂಪನಿಗಳು, ಸಂಸ್ಥೆಗಳು, ಸಹಕಾರ ಸಂಸ್ಥೆಗಳು, ನಿರ್ದಿಷ್ಟ ಸ್ಥಿತಿಯಲ್ಲಿಲ್ಲದೆ ಭೂಮಿಯ ಒಡೆತನವನ್ನು ಪಡೆಯುವುದನ್ನು ತಡೆಗಟ್ಟಲಾಯಿತು. ರಾಜ್ಯದ ಪುನರ್ ವಿಂಗಡಣೆಯಾದ ನಂತರ (ನವೆಂಬರ್ ೧೯೫೬) ಹಿಂದಿನ ಪ್ರಾಂತ್ಯಗಳಲ್ಲಿದ್ದ ಪ್ರಚಲಿತ ಗೇಣಿದಾರ ನಿಯಮಗಳು ನವ ಕರ್ನಾಟಕಕ್ಕೆ ಬಳುವಳಿಯಾಗಿ ಬಂದವು. ಈ ಹೆಚ್ಚುವರಿ ಭೂಮಿಯಲ್ಲಿ ಶೇ. ೫೦ರಷ್ಟು ಭೂಮಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಜನಾಂಗಗಳಿಗೆ ಮೀಸಲಿಡಲಾಗಿತ್ತು. ಗೇಣಿದಾರರು ಎ.ಬಿ.ಸಿ ವರ್ಗದ ಭೂಮಿಗಳಿಗೆ ನಿವ್ವಳ ವಾರ್ಷಿಕ ಆದಾಯದ ೧೫ ರಷ್ಟು ಮೊತ್ತವನ್ನೂ ಡಿ ವರ್ಗದ ಭೂಮಿಗಳಿಗೆ ೨೦ ರಷ್ಟು ಮೊತ್ತವನ್ನು ಸರ್ಕಾರಕ್ಕೆ ನೊಂದಣಿ ಮಾಡಲು ಪಾವತಿ ಮಾಡಬೇಕಾಗಿದ್ದಿತು. ಈ ಮೊತ್ತವನ್ನು ಒಮ್ಮೆಲೆ ಅಥವಾ ೨೦ ವಾರ್ಷಿಕ ಕಂತುಗಳಲ್ಲಿ ಶೇ. ೪ರ ಬಡ್ಡಿಯಂತೆ ಕೊಡಲು ಅವಕಾಶವಿದ್ದಿತು. ಶ್ವಾಶತ ಗೇಣಿದಾರರಿಗೆ ಈ ಮೊತ್ತವು ಗೇಣಿ ಬಾಡಿಗೆ ಮತ್ತು ಭೂ ಕಂದಾಯದ ವ್ಯತ್ಯಾಸದ ಆರರಷ್ಟಿರಬೇಕು. ಆದಾಗ್ಯೂ ಈ ಭೂಮಿಯನ್ನು ಮರು ವಿಭಾಗ ಮಾಡಿದರೆ ಮರು ಗೇಣಿಗೆ ನೀಡಿದ್ದರೆ. ಬೇರೊಬ್ಬರಿಗೆ ಗೇಣಿಗೆ ನೀಡಿದರೆ, ಭೂಮಿಯ ಬಂಜರನ್ನಾಗಿ ಮಾಡಿದರೆ ಅಥವಾ ಕೃಷಿಯೇತರ ಕಾರ್ಯಗಳಿಗೆ ಉಪಯೋಗಿಸಿದರೆ ಅವರನ್ನು ಒಕ್ಕಲೆಬ್ಬಿಸಲು ಕಾನೂನಿನಲ್ಲಿ ಅವಕಾಶ ಇದ್ದಿತು.

೧೯೫೨ ರ ದಿ ಮೈಸೂರು ಟೆನನ್ಸಿ ಆಕ್ಟನ್ನು ತಿದ್ದುಪಡಿ ಮಾಡಿ ಕರ್ನಾಟಕ ಸರ್ಕಾರವು ಆಕ್ಟೋಬರ್ ೧೯೫೪ ರಲ್ಲಿ ಶಾಸನ ಸಭೆಯಲ್ಲಿ ಠರಾವನ್ನು ಮಂಡಿಸಿತು. ಇದರಂತೆ ಗೇಣಿದಾರರನ್ನು ಈ ರೀತಿ ವಿಂಗಡಿಸಲಾಯಿತು. ರಕ್ಷಿಸಲ್ಪಟ್ಟ ಗೇಣಿದಾರರು (ಪ್ರೊಟೆಕ್ಟಡ್ ಟೆನೆಂಟ್ಸ್) ರಕ್ಷಿಸಲ್ಪಡದಿರುವ ಗೇಣಿದಾರರು (ನಾನ್ ಪೊಟೆಕ್ಟೆಡ ಟೆನೆಂಟ್ಸ್) ಮತ್ತು ಸಾಧಾರಣ ಗೇಣಿದಾರರು. ಒಕ್ಕಲುತನ ಬಿಡಿಸಲು ಇದ್ದ ಸಾಧಾರಣ ಕಾರಣಗಳನ್ನು ಕೇವಲ ಮರು ವಿಂಗಡಣೆ ಮಾಡಿದ ಕಾರಣಕ್ಕೆ ಹೊರತು ಪಡಿಸಿ ಬದಲಾಯಿಸಲಾಯಿತು. ರಕ್ಷಿಸಲ್ಪಟ್ಟ ಸಾಗುವಳಿದಾರರೆಂದರೆ, ಜಮೀನಿನ ಮಾಲೀಕನ ಸ್ವಂತ ಸಾಗುವಳಿಗೆ ಮತ್ತು ಕೃಷಿಯೇತರ ಉಪಯೋಗಕ್ಕೆ ಪರಿಮಿತಿ ಇರುವ ಹಿಡುವಳಿಯ ನಾಲ್ಕನೇ ಒಂದು ಭಾಗದಷ್ಟು ಉಪಯೋಗ ಮಾಡುವವರು ಎಂದು ಅರ್ಥೈಯಿಸಲಾಯಿತು. ಅರಕ್ಷಿತ ಸಾಗುವಳಿದಾರರನ್ನು ಒಂದು ವರ್ಷ ಮುನ್ನಾ ತಿಳುವಳಿಕೆ ಪತ್ರ

ಜಾರಿಮಾಡಿ, ಜಮೀನಿನ ಮಾಲೀಕನ ಸ್ವಂತ ಉಪಯೋಗಕ್ಕೆ ಬೇಕೆಂಬ ಕಾರಣಕ್ಕೆ ಒಕ್ಕಲುತನದಿಂದ ಬಿಡಿಸಬಹುದಾಗಿತ್ತು ಎರಡು ವರ್ಷದ ಅವಧಿಯಲ್ಲಿ ಭೂ ಮಾಲೀಕನು ಸ್ವಂತ ಸಾಗುವಳಿ ಮಾಡದಿದ್ದಲ್ಲಿ ಒಕ್ಕಲುತನದಿಂದ ಬಿಡಿಸಲ್ಪಟ್ಟ ಸಾಗುವಳಿದಾರನಿಗೆ ಪುನಃ ಭೂಮಿಯನ್ನು ಕೊಡಲಾಗುತ್ತಿತ್ತು. ಇತರ ಸಾಗುವಳಿದಾರರಿಗೆ ಕನಿಷ್ಟ ೧೦ ವರ್ಷಗಳ ಅವಧಿಯನ್ನು ಕೊಟ್ಟು ಆ ಅವಧಿಯ ನಂತರ ಒಕ್ಕಲುತನದಿಂದ ಬಿಡಿಸಲ್ಪಡುತ್ತಿದರು.

ರಕ್ಷಿತ ಮತ್ತು ಅರಕ್ಷಿತ ಸಾಗುವಳಿದಾರರಿಗೆ ಮಾತ್ರ ಒಂದೇ ಕಂತಿನಲ್ಲಿ ಅಥವಾ ಗರಿಷ್ಠ ೬ ಕಂತಿನಲ್ಲಿ ಹತ್ತು ವರ್ಷಗಳ ಅವಧಿಗೆ ಮೀರದಂತೆ ಮಾರುಕಟ್ಟೆ ಬೆಲೆಯನ್ನು ಕೊಟ್ಟು ಭೂಮಿಯನ್ನು ಕೊಳ್ಳುವ ಹಕ್ಕಿದ್ದಿತು. ಇದಕ್ಕೆ ಇದ್ದ ಷರತ್ತು ಎಂದರೆ ಸಾಗುವಳಿದಾರನು ಕೊಳ್ಳಬಹುದಾದ ಭೂಮಿಯು ೨೫ ಸ್ಟಾಂಡರ್ಸ್ ಎಕರೆ ಮತ್ತು ಕೊಂಡನಂತರ ಭೂ ಮಾಲೀಕನ ಬಳಿ ಉಳಿಯಬಹುದಾದ ಜಮೀನು ಪರವಾನಗಿ ಉಳ್ಳ ಹಿಡುವಳಿಗಳಿಗಿಂದ ಕಡಿಮೆ ಇರಬಾರದು (ಅಂದರೆ ೨೫ ರಿಂದ ೧೦೦ ಸ್ಟಾಂಡರ್ಡ್ ಎಕರೆಗಳು). ಕೊಂಡ ನಂತರ ಸಾಗುವಳಿದಾರರಿಗೆ ಈ ಭೂಮಿಯನ್ನು ಮಾರುವ ಅಥವಾ ಉಡುಗೊರೆಯಾಗಿ ಕೊಡುವ ಹಕ್ಕು ಇರುವುದಿಲ್ಲ.

**ಭೂ ನ್ಯಾಯಮಂಡಳಿಗಳು**

ಕರ್ನಾಟಕ ಭೂ ಸುಧಾರಣೆ ಅಧಿನಿಯಮ ೧೯೬೧ರ ಕಲಂ ೪೮ರಲ್ಲಿ ತಿಳಿಸಿರುವಂತೆ ಭೂನ್ಯಾಯ ಮಂಡಳಿಗಳನ್ನು ರಚಿಸಲಾಯಿತು. ಈ ಮಂಡಳಿಗಳು ಪ್ರತಿ ತಾಲೂಕಿನಿಂದ ಒಬ್ಬ ವ್ಯಕ್ತಿ, ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟ ನಾಲ್ಕು ವ್ಯಕ್ತಿಗಳು ಮತ್ತು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿಯೂ ತಹಶೀಲ್ದಾರ ಕಾರ್ಯದರ್ಶಿಯಾಗಿಯು ಇರುವಂತೆ ರಚಿಸಲಾಗಿತ್ತು. ಇದಲ್ಲದೆ ಕಾನೂನಿನನ್ವಯ ಒಬ್ಬ ಸದಸ್ಯನು, ಪರಿಶಿಷ್ಟ ಜಾತಿಗೆ ಅಥವಾ ಬುಡಕಟ್ಟಿಗೆ ಸೇರಿದವನಾಗಿರಬೇಕಾಗಿದ್ದಿತು. ವ್ಯಾಜ್ಯಗಳನ್ನು ಬಹುಮತದ ಮೂಲಕ ತೀರ್ಮಾನಿಸಲಾಗುತ್ತಿತ್ತು. ಮತ್ತು ಕೋರಂಗಾಗಿ ಮೂರು ಮಂದಿ ಮತ್ತು ಅಧ್ಯಕ್ಷರಲ್ಲದೆ ಕೋರಂನ್ನು ಗಣಿಸುತ್ತಿರಲಿಲ್ಲ. ಅರ್ಜಿದಾರರ ಅನುಕೂಲಕ್ಕಾಗಿ ಒಂದು ಕಂದಾಯ ತಾಲೂಕಿಗೆ ಒಂದು ನ್ಯಾಯ ಮಂಡಳಿಯನ್ನು ಹೆಚ್ಚಿನ ಒತ್ತಡವಿದ್ದಲ್ಲಿ ಎರಡು ಅಥವಾ ಹೆಚ್ಚು ನ್ಯಾಯ ಮಂಡಳಿಗಳನ್ನು ರಚಿಸಲಾಗುತ್ತಿತ್ತು. ಇದರಿಂದ ತಾಲೂಕು ಮಟ್ಟದಲ್ಲಿಯೇ ವ್ಯಾಜ್ಯಗಳನ್ನು ಅಂತಿಮವಾಗಿ ತೀರ್ಮಾನ ಮಾಡುವ ಒಂದು ಪ್ರಾಧಿಕಾರ ಇದಾಗಿದ್ದಿತು.

ಕಲಂ ೪೮ ಎ ನಂತೆ ಒಂದನೆ ಮಾರ್ಚ್ ೧೯೭೪ರಿಂದ ಆರು ತಿಂಗಳುಗಳೊಳಗೆ ನೀಡಿದ ಹಕ್ಕನ್ನು ಪಡೆಯಲು ಅರ್ಜಿಯ ವಿಚಾರಣೆ ಮಾಡಲು ಅವಕಾಶಮಾಡಲಾಗಿತ್ತು. ಈ ನ್ಯಾಯಮಂಡಳಿಗಳ ಮುಖ್ಯವಾದ ಕಾರ್ಯಗಳೆಂದರೆ ಭೂಸುಧಾರಣೆ ನಿಯಮಗಳಂತೆ ಸಾಗುವಳಿದಾರನು ಭೂಮಿ ಸ್ವಾಧೀನ ಪಡೆಯಲು ನೊಂದಣಿಮಾಡುವುದರ ಬಗ್ಗೆ ವಿಚಾರಣೆ ನಡೆಸಿ ಅರ್ಜಿದಾರರು ಸಾಗುವಳಿದಾರನೇ ಅಲ್ಲವೇ ಎಂಬುದನ್ನೂ ಕಲಂ ೭೭ರಂತೆ ಬಾಗಾಯ್ತು ಅಲ್ಲದೆ ಹೆಚ್ಚುವರಿ ಜಮೀನನ್ನು ನೀಡುವುದು ಮತ್ತು ನಿಯಮಗಳಲ್ಲಿ ತಿಳಿಸಿರುವ ಇತರೆ ಯಾವುದೇ ಕಾರ್ಯಗಳನ್ನು ನಿರ್ವಹಿಸುವುದು ಈ ಭೂ ನ್ಯಾಯಮಂಡಳಿಯ ಕಾರ್ಯ ವ್ಯಾಪ್ತಿಯಾಗಿದ್ದಿತು. ಕಾಯಿದೆಯ ಕಲಂ ೧೧೨ (ಎ) ನಲ್ಲಿ ತಹಶೀಲದಾರರವರ ಕರ್ತವ್ಯಗಳನ್ನು ಸೂಚಿಸಲಾಗಿದೆ. ಈ ನ್ಯಾಯಮಂಡಳಿಯ. ತೀರ್ಮಾನವು ಅಂತಿಮವಾಗಿದ್ದು ಯಾವುದೇ ನ್ಯಾಯವಾದಿಯು ಈ ನ್ಯಾಯ ಮಂಡಳಿಯ ಮುಂದೆ ಹಾಜರಾಗಲು ಅವಕಾಶವಿರಲಿಲ್ಲ. ಯಾವುದೇ ಸಿವಿಲ್ ನ್ಯಾಯಾಲಯಕ್ಕೂ ನ್ಯಾಯಮಂಡಳಿಯ ತೀರ್ಮಾನಗಳನ್ನು ಪ್ರಶ್ನಿಸುವ ವ್ಯವಹರಿಸುವ ವ್ಯಾಪ್ತಿ ಇರುವುದಿಲ್ಲ. ಮೇಲ್ಮನವಿಯನ್ನು ಉಚ್ಚನ್ಯಾಯಾಲಯಕ್ಕೆ ಮಾತ್ರ ಸಲ್ಲಿಸಬಹುದು. ೨೬ ಮೇ ೧೯೮೬ರಿಂದ ಪ್ರತಿ ಜಿಲ್ಲೆಯಲ್ಲಿಯೂ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ಭೂ ಸುಧಾರಣ ನಿಯಮ ಕಲಂ ೧೧೬ (ಎ) ನಂತೆ ರಚಿಸಲಾಗಿದೆ. ಇದರಲ್ಲಿ ಒಬ್ಬರು ನ್ಯಾಯಾಂಗದಿಂದಲೂ ಮತ್ತೊಬ್ಬರೂ ಕಂದಾಯ ಇಲಾಖೆಯಿಂದಲೂ ಇರುವಂತೆ ಇಬ್ಬರು ಸದಸ್ಯರಿರುತ್ತಾರೆ. ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಿದ್ದ ವ್ಯಾಜ್ಯಗಳನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸಲಾಗಿದೆ.

ಭೂ ಮಿತಿಯ ಕಾನೂನಿನ ಅನ್ವಯ ಸರ್ಕಾರದ ಅಧೀನದಲ್ಲಿ ಉಳಿಯುವ ಹೆಚ್ಚುವರಿ ಜಮೀನನ್ನು ಭೂನ್ಯಾಯಮಂಡಳಿಯು ಈ ಕೆಳಗಿನಂತೆ ಆದ್ಯತೆ ಮೇರೆ ಹಂಚಬಹುದು.

(೧) ಭೂ ರಹಿತ ಕೃಷಿಕರು, ಕೃಷಿ ಕಾರ್ಮಿಕರು, ಭೂರಹಿತ ಸ್ಥಳಾಂತರಿಸಲ್ಪಟ್ಟ ಗೇಣಿ ದಾರರು (ಕನಿಷ್ಠ ಹಿಡುವಳಿಯಷ್ಟು ಇಲ್ಲದೇ)

(೨) ಕನಿಷ್ಠ ಹಿಡುವಳಿ ಇಲ್ಲದ ಗೇಣಿದಾರರು, ಸ್ಥಳಾಂತರಿಸಲ್ಪಟ್ಟ ಗೇಣಿದಾರರು, ಮತ್ತು ಕನಿಷ್ಠ ಹಿಡುವಳಿಯಿರುವ ಸ್ವಂತ ಸಾಗುವಳಿ ಮಾಡುವ ಜಮೀನಿನ ಒಡೆಯ.

(೩) ಒಂದು ಕುಟುಂಬಕ್ಕೆ ಬೇಕಾದ ಹಿಡುವಳಿಗಿಂತ ಕಡಿಮೆ ಭೂಮಿ ಇರುವ ಸಾಗುವಳಿದಾರ, ಮತ್ತು ಒಂದು ಕುಟುಂಬಕ್ಕೆ ಬೇಕಾದ ಹಿಡುವಳಿಗಿಂತ ಕಡಿಮೆ ಇರುವ ಸ್ವಂತ ಸಾಗುವಳಿ ಮಾಡುವ ಭೂ ಒಡೆಯ.

(೪) ಸ್ವಂತ ಸಾಗುವಳಿ ಮಾಡಲು ಇಚ್ಛಿಸುವ ಇತರರು

ಈ ರೀತಿ ವಿತರಿಸಲ್ಪಟ್ಟವರು ಭೂಮಿಯ ಬೆಲೆಯನ್ನು ಒಮ್ಮೆಲೇ ಅಥವಾ ಬಡ್ಡಿಯೊಡನೆ ೧೫ ವಾರ್ಷಿಕ ಕಂತುಗಳಲ್ಲಿ ಹಣ ಸಂದಾಯ ಮಾಡಬಹುದು.

**ಭೂ ಸುಧಾರಣೆ ಮೇಲ್ಮನವಿ ಪ್ರಾಧಿಕಾರ**

ಭೂ ಸುಧಾರಣ ನಿಯಮದ ಕಲಂ ೧೧೬ಎ ನಂತೆ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ಜಿಲ್ಲಾ ಮಟ್ಟದಲ್ಲಿ ಒಬ್ಬ ನ್ಯಾಯಾಧೀಶರನ್ನು ನ್ಯಾಯಿಕ ಸದಸ್ಯರನ್ನಾಗಿಯೂ, ಜಿಲ್ಲಾಧಿಕಾರಿಗಳ ಮಟ್ಟದಲ್ಲಿನ ಅಧಿಕಾರಿಯನ್ನು ಕಂದಾಯ ಸದಸ್ಯರನ್ನಾಗಿಯೂ ಹೊಂದಿರುವಂತೆ ರಚಿಸಲಾಗಿದೆ. ಭೂ ಸುಧಾರಣಾ ಮಂಡಳಿಯು ಭೂ ಸುಧಾರಣಾ ಕಾನೂನಿನನ್ವಯ ಮಾಡಿದ ತೀರ್ಮಾನಗಳ ಮೇಲೆ ಕಲಂ ೧೧೮ (ಎ) ನಂತೆ ಮೇಲ್ಮನವಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಈ ಮೇಲ್ಮನವಿಗಳನ್ನು ತೀರ್ಮಾನಿಸಲು ಪ್ರಾಧಿಕಾರಿಗಳಿಗೆ ಸಿವಿಲ್ ಪ್ರೊಸಿಜರಕೋಡ ನಲ್ಲಿರುವಂತೆ ಈ ಕೆಳಕಂಡ ಅಂಶಗಳನ್ನು ಹೊರತುಪಡಿಸಿ ಅಧಿಕಾರಿಗಳನ್ನು ನೀಡಲಾಗಿದೆ.

ಎ) ಭೂನ್ಯಾಯಮಂಡಳಿಗೆ ರಿಮ್ಯಾಂಡ ಮಾಡುವ ಅಧಿಕಾರ

ಬಿ) ಭೂ ನ್ಯಾಯ.ಮಂಡಳಿಯ ಅಂಶಗಳನ್ನು ತಿರಸ್ಕರಿಸುವ ಅಧಿಕಾರ.

ನ್ಯಾಯಿಕ ಸದಸ್ಯ ಹಾಗೂ ಕಂದಾಯ ಸದಸ್ಯರಿಬ್ಬರೂ ಮೇಲ್ಮನವಿಗಳನ್ನು ವಿಚಾರಣೆಮಾಡಿ, ತೀರ್ಮಾನಿಸಬಹುದು. ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾದರೆ, ನ್ಯಾಯಿಕ ಸದಸ್ಯರು ಆ ಸರಹದ್ದಿನಲ್ಲಿ ಬರುವ ಪ್ರಿನ್ಸಿಪಾಲ್ ಸಿವಿಲ್ ಜಡ್ಜಗೆ ವ್ಯಾಜ್ಯಗಳನ್ನು ಒಪ್ಪಿಸಬಹುದು. ಈ ಪ್ರಿನ್ಸಿಪಾಲ ಸಿವಿಲ್ ಜಡ್ಜರು ಪ್ರಸ್ತುತ ಅಂಶಗಳನ್ನು ಮಾತ್ರ ವಿಚರಾಣೆ ಮಾಡಿ ತೀರ್ಮಾನಿಸುತ್ತಾರೆ.

**ಸರ್ಕಾರಿ ಜಮೀನಿನ ವಿತರಣೆ**

ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ದಿಷ್ಟವಾದ ಭೂ ವಿತರಣಾ ನೀತಿ ಇರಲಿಲ್ಲ. ಅಧಿಕ ವಿಸ್ತೀರ್ಣದ ಭೂಮಿಯು ಬೆಳೆಯದೆ ಖಾಲಿ ಇದ್ದು, ಸಾಗುವಳಿ ಮಾಡದ ಜಮೀನನ್ನು ವಿವಿಧ ಸೇವೆಗಳಿಗೆ ಪ್ರೋತ್ಸಾಹವಾಗಿ ನೀಡಲಾಗುತ್ತಿತ್ತು. ಇದಲ್ಲದೆ ಹರಾಜು ಮೂಲಕ ಕೊಡ ಜಮೀನನ್ನು ವಿತರಿಸಲಾಗುತ್ತಿತ್ತು. ಸಾಗುವಳಿಯನ್ನು ವಿಸ್ತರಿಸುವುದು ಅತೀಮುಖ್ಯ ಉದ್ದೇಶವಾಗಿದ್ದಿತು. ಸ್ವಾತಂತ್ರ್ಯಾನಂತರ ಸರ್ಕಾರಿ ಭೂಮಿಯನ್ನು ವಿತರಿಸುವ ವಿಧಾನದಲ್ಲಿ ಸಾಮಾಜಿಕ ನ್ಯಾಯವನ್ನು ಗುರುತಿಸುವುದು ಉದ್ದೇಶಗಳಲ್ಲಿ ಒಂದಾಗಿದ್ದಿತು. ಬೇರೆ ಬೇರೆ ಪ್ರದೇಶದಲ್ಲಿದ್ದ ಭೂ ವಿತರಣಾ ನೀತಿಯನ್ನು ಕಾಲಕಾಲಕ್ಕೆ ತಿದ್ದುಪಡಿಗೊಳಿಸಿ ಭೂರಹಿತರಿಗೆ, ಅಲ್ಪ ಸಂಖ್ಯಾತರಿಗೆ ಸಾಕಷ್ಟು ಭೂಮಿ ಇಲ್ಲದವರಿಗೆ ಪ್ರಶಸ್ತಿಯನ್ನು ಕೊಟ್ಟು ಸಾಮಾಜಿಕ ನ್ಯಾಯ ದೊರಕಿಸಲಾಗುತ್ತಿತ್ತು.

೧೯೫೮ರಲ್ಲಿ ಕರ್ನಾಟಕ ರಾಜ್ಯದಲ್ಲಿ ಭೂ ವಿತರಣೆಯ ಬಗ್ಗೆ ಏಕರೂಪ ನೀತಿಯನ್ನು ಜಾರಿಯಲ್ಲಿ ತರುವ ಪ್ರಯತ್ನವನ್ನು ಮಾಡಲಾಯಿತು. ೧೯೬೮ರಲ್ಲಿ ಭೂ ವಿತರಣಾ ನಿಯಮಗಳನ್ನು ೧೯೫೦ರ ನಿಯಮಗಳ ಬದಲಿಗೆ ರಚಿಸಲಾಯಿತು.

ಆದರೆ ಪುನಃ ೧೯೬೯ರಲ್ಲಿ ಇವುಗಳನ್ನು ಬದಲಾಯಿಸಲಾಯಿತು. ಕರ್ನಾಟಕ ಭೂ ಕಾಯಿದೆ ೧೯೬೪ರ ಕಲಂ ೧೯೭ರಂತೆ ನೂತನ ಕರ್ನಾಟಕ ಭೂ ವಿತರಣಾ ನಿಯಮಗಳು ೧೯೬೯ನ್ನು ರಚಿಸಲಾಯಿತು.

ಈ ನಿಯಮಾವಳಿಗಳು ३.೬.೧೯೬೯ ರಿಂದ ಅನುಷ್ಠಾನಕ್ಕೆ ಬಂದವು. ೧೯೭೭ ರ ನಂತರ ಕರ್ನಾಟಕ ಭೂ ವಿತರಣಾ ನಿಯಮಗಳನ್ನು ಅನೇಕ ಬಾರಿ ತಿದ್ದುಪಡಿ ಮಾಡಲಾಯಿತು. ಇದರಂತೆ ವಿತರಿಸಲು ಇರುವ ಭೂಮಿಯ ಪರೀಕ್ಷೆ ಮಾಡುವ ಜವಾಬ್ದಾರಿಯನ್ನು ತಹಶೀಲದಾರರಿಗೆ ಕೊಡಲಾಯಿತು. ಈ ಮುಂದಿನ ಪ್ರಮಾಣದಲ್ಲಿ ವಿಲೇವಾರಿಗೆ ಇರುವ ಭೂಮಿಯನ್ನು ನಿಶ್ಚಿತ ಗೊಳಿಸಲಾಯಿತು. ಮಾಜಿ ಸೈನಿಕರು ಮತ್ತು ಯೋಧರು ಶೇ. ೧೦ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಶೇ. ೫೦, ರಾಜಕೀಯ ಸಂತ್ರಸ್ತರು ಶೇ. ೧೦ ಮತ್ತು ಉಳಿದವರು ಶೇ. ३೦. ಪ್ರಾಶಸ್ತ್ಯವು ಈ ರೀತಿ ಇದ್ದಿತು. (೧) ಗ್ರಾಮದಲ್ಲಿ ವಾಸಿಸುವ ಭೂರಹಿತ ವ್ಯಕ್ತಿಗಳು (೨) ಸಾಕಷ್ಟು ಜಮೀನಿಲ್ಲದ ಗ್ರಾಮದಲ್ಲಿ ವಾಸಿಸುವ ಹಿಡುವಳಿದಾರನು (३) ಅಕ್ಕಪಕ್ಕ ಗ್ರಾಮದಲ್ಲಿನ ಭೂರಹಿತರು ಮತ್ತು (೪) ಇತರರು.

ಕೃಷಿ ಉದ್ದೇಶಕ್ಕಾಗಿ ನೀಡಿದ್ದ ಭೂಮಿಯನ್ನು ೧೫ ವರುಷಗಳ ಕಾಲ ಪರಭಾರೆ ಮಾಡಬಾರದೆಂದು ಮತ್ತು ವಶಕ್ಕೆ ತೆಗೆದುಕೊಂಡ ३ ವರ್ಷದ ಅವಧಿಯಲ್ಲಿ ಸಾಗುವಳಿ ಮಾಡಬೇಕೆಂದೂ ನಿಯಮವಿದ್ದಿತು. ಯಾವ ಉದ್ದೇಶಕ್ಕಾಗಿ ಭೂಮಿಯನ್ನು ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಬೇಕೆಂಬ ನಿಯಮವೂ ಇದ್ದಿತು. ಭೂ ವಿತರಣೆಗಾಗಿ ಬರುವ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಿ, ಭೂಮಿಯನ್ನು ವಿತರಿಸಬಹುದಾದ ಅಥವಾ ಉನ್ನತ ಪ್ರಾಧಿಕಾರಕ್ಕೆ ನೀಡುವ ಅಧಿಕಾರವನ್ನು ತಹಸೀಲದಾರರಿಗೆ ಕೊಡಲಾಗಿತ್ತು. ಪಟ್ಟಣ ವ್ಯಾಪ್ತಿಯಲ್ಲಿರುವ ಭೂಮಿಯನ್ನು ಈ ನಿಯಮಾವಳಿಯ ಮೂಲಕ ವಿತರಿಸುವ ಹಾಗಿರಲಿಲ್ಲ.

## ಭೂ ಸ್ವಾದೀನ

ಸರ್ಕಾರಕ್ಕೆ ಯಾವುದೇ ಪ್ರದೇಶದಲ್ಲಿನ ಭೂಮಿಯು ಸಾರ್ವಜನಿಕ ಉಪಯೋಗಕ್ಕೆ ಬೇಕಾದ ಸಂದರ್ಭಗಳಲ್ಲಿ ಈ ಬಗ್ಗೆ ಒಂದು ಸಾರ್ವಜನಿಕ ತಿಳುವಳಿಕೆ ಪತ್ರವನ್ನು ಅಲ್ಲಿನ ಜಿಲ್ಲಾಧಿಕಾರಿಗಳು ನೀಡಿ ಪ್ರಮುಖವಾದ ಸ್ಥಳಗಳಲ್ಲಿ ಈ ತಿಳುವಳಿಕೆಯನ್ನು ಆ ಪ್ರದೇಶದಲ್ಲಿ ನೀಡಲಾಗುವುದು. ಭೂ ಸ್ವಾಧೀನ ಅಧಿ ನಿಯಮ ೧೮೯೪ರ ಕೇಂದ್ರದ ಅಧಿನಿಯಮವನ್ನು ಕರ್ನಾಟಕ ರಾಜ್ಯಕ್ಕೂ ವಿಸ್ತರಿಸಿ ಕರ್ನಾಟಕ ಭೂ ಸ್ವಾಧೀನ ಅಧಿನಿಯಮ ೧೯೬೧ (ಕರ್ನಾಟಕದ ವಿಸ್ತರಣೆ ಮತ್ತು ತಿದ್ದುಪಡಿ) ಸಾರ್ವಜನಿಕ ಸೌಲಭ್ಯಗಳಿಗೆ ಭೂ ಸ್ವಾಧೀನ ಮಾಡಿಕೊಳ್ಳಲು ಮೂಲ ನಿಯಮವಾಗಿದ್ದಿತ್ತು.

ಜಿಲ್ಲಾಧಿಕಾರಿಗಳು ಆ ಭೂಮಿಯನ್ನು ನಕ್ಷೆಯ ಮೂಲಕ ಗುರುತಿಸಲು ಅಳತೆ ಮಾಡಲು ಮತ್ತು ನಕ್ಷೆ ತಯಾರಿಸಲು ವ್ಯವಸ್ಥೆ ಮಾಡುತ್ತಾರೆ. ಈ ಭೂಮಿಯ ಬಗ್ಗೆ ಪರಿಹಾರ ಧನಕ್ಕೆ ಅರ್ಜಿಯನ್ನು ಜಿಲ್ಲಾಧಿಕಾರಿಗಳಿಗೆ ಮಾಡಬೇಕು. ಈ ಬಗೆಯ ಅರ್ಜಿಗಳಲ್ಲಿ ಬೇಡಿದ ಭೂಮಿಯ ವಿವರ, ಆಸಕ್ತಿಯುಳ್ಳ ವ್ಯಕ್ತಿಗಳು ಮುಖತಃ ಅಥವಾ ತಮ್ಮ ಪ್ರತಿನಿಧಿಯ ಮೂಲಕ ಜಿಲ್ಲಾಧಿಕಾರಿಗಳ ಮುಂದೆ ನಿಗದಿತ ಪ್ರದೇಶದಲ್ಲಿ ಹಾಜರಾಗಿ ತಮ್ಮ ಆಸಕ್ತಿ ಹಾಗೂ ಪರಿಹಾರ ನಿಧಿಯ ಮೊತ್ತ ಮತ್ತು ಅಳತೆಯಲ್ಲಿ ಏನಾದರೂ ಆಕ್ಷೇಪವಿದ್ದಲ್ಲಿ ಅವುಗಳನ್ನು ಒಪ್ಪಿಸಬಹುದು.

ಅರ್ಜಿದಾರರ ಅಹವಾಲನ್ನು ವಿಚಾರಿಸಿದ ನಂತರ ಜಿಲ್ಲಾಧಿಕಾರಿಗಳು ಕಲಂ ೧೧ ರಂತೆ ಆದೇಶವನ್ನು ಜಾರಿಗೊಳಿಸಿ ಭೂಮಿಯನ್ನು ಸ್ವಾದೀನ ಪಡಿಸಿಕೊಳ್ಳುತ್ತಾರೆ ಮತ್ತು ನಂತರದ ಆ ಭೂಮಿಯು ಪರಭಾರವಿಲ್ಲದೆ ಸರ್ಕಾರದ ಸೌಮ್ಯದಲ್ಲಿ ಸಂಪೂರ್ಣವಾಗಿರುತ್ತದೆ. ಈ ತೀರ್ಮಾನಕ್ಕೆ ಆಕ್ಷೇಪಣೆ ಏನಾದರೂ ಇದ್ದಲ್ಲಿ ಜಿಲ್ಲಾಧಿಕಾರಿಗಳಿಗೆ ಲಿಖಿತ ಅರ್ಜಿ ಮೂಲಕ ಅಳತೆಯ ಬಗ್ಗೆ ಪರಿಹಾರದ ಮೊತ್ತದ ಬಗ್ಗೆ, ಯಾರಿಗೆ ಪರಿಹಾರ ನೀಡಬೇಕೆಂಬುದರ ಬಗ್ಗೆ ಮತ್ತು ಪರಿಹಾರವನ್ನು ಪ್ರಮಾಣತಕ್ರವಾಗಿ ಸಂಬಂಧಪಟ್ಟವರಿಗೆ ಹಂಚುವ ಬಗ್ಗೆ ನ್ಯಾಯಾಲಯ ತೀರ್ಪು ನೀಡಬಹುದು. ೧೯೮೪ರ ಭೂ ಸ್ವಾಧೀನ ಅಧಿನಿಯಮ (ತಿದ್ದುಪಡಿ) ಯು ೧೮೯೪ರ ಭೂ ಸ್ವಾಧೀನ ಆಜ್ಞೆಗಳಿಗೆ ಅನುಮೋದನೆಗೆ ನೀಡಬೇಕಾಗುವ ಅವಕಾಶವನ್ನು ಒದಗಿಸಿದೆ. ಪ್ರಸ್ತುತ ಈ ತೀರ್ಮಾನಗಳನ್ನು ಅನುಮೋದನೆ ಮಾಡಬಹುದಾದ ಮಿತಿ ಈ ರೀತಿ ಇದೆ. ಜಿಲ್ಲಾಧಿಕಾರಿಗಳು ೧೦ ಲಕ್ಷ ರೂವರೆಗೆ, ವಿಭಾಗಧಿಕಾರಿಗಳು ೨೦ ಲಕ್ಷ ರೂ.ಗಳವರೆಗೆ ಮತ್ತು ರಾಜ್ಯ ಸರ್ಕಾರ ೨೦ ಲಕ್ಷಕ್ಕೂ ಹೆಚ್ಚು .

## ಭೂ ಕಂದಾಯವಲ್ಲದ ಇತರ ತೆರಿಗೆಗಳು

ರಾಜ್ಯ ಸರ್ಕಾರವು ಪ್ರತ್ಯಕ್ಷ ಪರೋಕ್ಷವಾಗಿ ಮತ್ತು ಕೇಂದ್ರ ತೆರಿಗೆಗಳಲ್ಲಿ ಪಾಲು ಇವುಗಳ ಮೂಲಕ ಆದಾಯವನ್ನು ಹೊಂದಿದೆ. ಸರ್ಕಾರದ ಕಂದಾಯ ನೀತಿಯೆಂದರೆ ಸಾಧ್ಯವಿದ್ದೆಡೆಯಲ್ಲಿಯ ತೆರಿಗೆಯ ಮೂಲಗಳನ್ನು ಹೆಚ್ಚಿಸುವುದು. ಪ್ರಸ್ತುತ ಜಾರಿಯಲ್ಲಿರುವ ಕಂದಾಯ. ಕ್ರಮಗಳಲ್ಲಿ ಸುಧಾರಣೆ ಮತ್ತು ನೂತನ ಕಂದಾಯದ ಮೂಲಗಳನ್ನು ಕಂಡು ಹಿಡಿಯುವುದು. ಇದರಂತೆ ಬಹುಮುಖ ತೆರಿಗೆ, ವಿಧಾನಗಳು ಅಂದರೆ ಅಬಕಾರಿ ಸುಂಕ, ವಾಣಿಜ್ಯ ತೆರಿಗೆ, ಮುದ್ರಾಂಕ ಶುಲ್ಕ, ವಾಹನ ತೆರಿಗೆ ವಿದ್ಯುಚ್ಛಕ್ತಿ ತೆರಿಗೆ ಮೊದಲಾದವುಗಳು. ಈ ತೆರಿಗೆ ದರಗಳಲ್ಲಿ ಸೂಕ್ತ ಬದಲಾವಣೆಗಳನ್ನು ಕಾಲಕಾಲಕ್ಕೆ ಮಾಡಲಾಗುತ್ತದೆ.

## ವಾಣಿಜ್ಯ ತೆರಿಗೆ

ಒಟ್ಟು ತೆರಿಗೆಯಲ್ಲಿ ಬಹುಪಾಲು ತೆರಿಗೆಯನ್ನು ಶೇಖರಿಸುವ ವಾಣಿಜ್ಯ ತೆರಿಗೆ ಇಲಾಖೆಯು ಈ ಕೆಳಗಿನ ಅಧಿನಿಯಮಗಳನ್ನು ಪಾಲಿಸುತ್ತದೆ.

೧) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ೧೯೫೭

೨) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ ೧೯೫೬

೩) ಕರ್ನಾಟಕ ಮರೋರಂಜನೆ ತೆರಿಗೆ ಅಧಿನಿಯಮ ೧೯೫೮

೪) ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ ೧೯೫೭

೫) ಕರ್ನಾಟಕ ವೃತ್ತಿ ವ್ಯಾಪಾರ ಹಾಗೂ ಉದ್ಯೋಗ ತೆರಿಗೆ ಅಧಿನಿಯಮ ೧೯೭೬

೬) ಕರ್ನಾಟಕ ಐಶಾರಾಮ ತೆರಿಗೆ ಅಧಿನಿಯಮ (ಹೋಟೇಲುಗಳು ಮತ್ತು ವಸತಿ ಗೃಹಗಳು)

## ಮಾರಾಟ ತೆರಿಗೆ

ಮಾರಾಟ ತೆರಿಗೆಯ ಬಗ್ಗೆ ಎರಡು ಅಧಿನಿಯಮಗಳು ಒಳಗೊಂಡಿವೆ. ಕರ್ನಾಟಕ ಮಾರಾಟ ತೆರಿಗೆ ೧೯೫೭ ಮತ್ತು ಕೇಂದ್ರ ಮಾರಾಟ ತೆರಿಗೆ ಅಧಿನಿಯಮ ೧೯೫೬. ಎರಡನೆಯ ಅಧಿನಿಯಮದ ಅನ್ವಯ ರಾಜ್ಯಕ್ಕೆ ತನ್ನ ವ್ಯಾಪ್ತಿಯಲ್ಲಿ ಅಥವಾ ಅಂತರರಾಜ್ಯದಲ್ಲಿ ಮಾರುವ ಅಥವಾ ಖರೀದಿಸುವ ತೆರಿಗೆ ವಿಧಾನವು ಸಿಂಗಲ್ ಪಾಯಿಂಟ್ ಮತ್ತು ಮಲ್ಟಿ ಪಾಯಿಂಟ್ ತೆರಿಗೆ ಪದ್ಧತಿಯಾಗಿದೆ. ಏಕಸ್ಥಾನೀಯ (ಸಿಂಗಲ್ ಪಾಯಿಂಟ್) ತೆರಿಗೆಯನ್ನು ಉತ್ಪಾದಿಸುವವರು ಆಮದುಮಾಡಿಕೊಳ್ಳುವವರು ಅಥವಾ ತಯಾರಿಸುವವರು ಇವರಿಂದ ಗ್ರಾಹಕನಿಗೆ ಸಲ್ಲುವ ವ್ಯವಹಾರಗಳಲ್ಲಿ ಒಂದು ಘಟ್ಟದಲ್ಲಿ ಮಾತ್ರ ಹೇರಲಾಗುವುದು. ಆದರೆ ಬಹುಸ್ಥಾನೀಯ ತೆರಿಗೆಯು ಶೇ. ೧೭ ರಿಂದ ಶೇ. ೨೦೦ ರ ವರೆಗೂ ಇದೆ. ಒಟ್ಟು ೨೯೩ ಪ್ರಮುಖ ವಸ್ತುಗಳು, ೧೭೮ ಇತರೆ ವಸ್ತುಗಳ ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಉಳಿದವು ಮಲ್ಟಿ ಪಾಯಿಂಟ್ ವ್ಯವಸ್ಥೆಯಲ್ಲಿ ಇರುತ್ತವೆ. ಈ ಅಧಿನಿಯಮಗಳ ಅಧೀನದಲ್ಲಿ ಒಬ್ಬ ವ್ಯಾಪಾರಿಯ ಒಟ್ಟು ವಹಿವಾಟು ೨೫೦೦೦ ರೂ. ಅಥವಾ ಅದಕ್ಕೂ ಹೆಚ್ಚಿದ್ದಲ್ಲಿ ನೊಂದಣಿ ಮಾಡಿಸಬೇಕು ಮತ್ತು ವರಮಾನವು ತೆರಿಗೆ ನೀಡಬೇಕಾದ ವಹಿವಾಟಿಗಿಂತ ಹೆಚ್ಚಿದಲ್ಲಿ ತೆರಿಗೆ ನೀಡಬೇಕು. ಒಟ್ಟು ವಹಿವಾಟು ೭೫,೦೦೦ ರೂಗಳಿಗಿಂತಲೂ ಹೆಚ್ಚು ಇರುವ ವ್ಯಾಪಾರಿಯು ತನ್ನ ಇಚ್ಛೆಯಂತೆ ಒಂದು ನಿರ್ದಿಷ್ಟ ದರದಲ್ಲಿ ಸಂಯುಕ್ತ ವಿಧಾನದಲ್ಲಿ ಅವರು ಏಕಸ್ಥಾನೀಯದಲ್ಲಿನ ವಸ್ತುಗಳನ್ನು ವ್ಯವಹರಿಸದಿದ್ದ ಪಕ್ಷದಲ್ಲಿ ಕೇಂದ್ರ ಮಾರಾಟ ತೆರಿಗೆ ೧೯೫೬ ರೀತ್ಯಾ ನೋಂದಣಿ ಮಾಡಬಹುದು.

## ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ ೧೯೫೮

೧೯೫೮ರ ಡಿಸೆಂಬರ್ ರವರೆಗೆ ರಾಜ್ಯದಲ್ಲಿನ ವಿಲೀನವಾದ ಪ್ರದೇಶಗಳಲ್ಲಿ ಬೇರೆ ಬೇರೆ ವಾಣಿಜ್ಯ ತೆರಿಗೆ ನಿಯಮಗಳು ಜಾರಿಯಲ್ಲಿದ್ದವು ೧೯೫೯ ಜನವರಿ ಒಂದರಿಂದ ಇಡೀ ರಾಜ್ಯಕ್ಕೆ ಅನ್ವಯವಾಗುವ ಮನರಂಜನೆ ತೆರಿಗೆ ಕಾಯಿದೆ ಜಾರಿ ಮಾಡಲಾಯಿತು. ಇದರ ಸಂಗ್ರಹಣೆಯ ಜವಾಬ್ದಾರಿ ಮಾರಾಟ ತೆರಿಗೆ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ

ಬಂದಿತು. ಚಲನಚಿತ್ರ ಮಂದಿರ ಮತ್ತು ಕುದುರೆ ಪಂದ್ಯಗಳ ಜೂಜು (ಟಿಕೆಟ್)ಗಳ ಮೇಲೆ ಈ ಕರವನ್ನು ಹೇರಲಾಗುತ್ತಿದೆ. ನಾಟಕ ಸಂಗೀತ ಕಾರ್ಯಕ್ರಮಗಳು ಈ ನಿಯಮದ ವ್ಯಾಪ್ತಿಯಲ್ಲಿ ಬರುವುದಿಲ್ಲ. ೧೯೬೨ರಲ್ಲಿ ರಾಜ್ಯದ ಆರ್ಥಿಕ ಮತ್ತು ಸಂಪನ್ಮೂಲ ಸಮಿತಿಯ ಶಿಫಾರಸಿನಂತೆ ಮನೋರಂಜನೆ ತೆರಿಗೆಯ ಮೇಲೆ ಶೇ. ೨೫ ರಷ್ಟು ಸರ್‌ಛಾರ್ಜ್ ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಲು ವಿಧಿಸಲಾಯಿತು. ೧೯೬೬ರಲ್ಲಿ ಈ ಸರ್‌ಛಾರ್ಜ್ ದರವನ್ನು ಕರ್ನಾಟಕದಲ್ಲಿ ಚಲನ ಚಿತ್ರೋದ್ಯಮಕ್ಕೆ ಅನುದಾನ ಕೊಡಲು, ಶೇ. ೧೦ರಷ್ಟು ಹೆಚ್ಚಿಸಲಾಯಿತು. ಇದರಂತೆ ೧೯೬೬ರಲ್ಲಿ ದರದಲ್ಲಿ ಬದಲಾವಣೆಯಾದಾಗ ಶೋಟ್ಯಾಕ್ಸ್ (ಪ್ರದರ್ಶನ ತೆರಿಗೆ) ಮೇಲಿನ ಸರ್‌ಛಾರ್ಜ್‌ನ್ನು ಶೋಟ್ಯಾಕ್ಸ್‌ಗೆ ಸೇರಿಸಲಾಯಿತು. ೧೯೭೧ರಲ್ಲಿ ಇದನ್ನು ಶೇ. ೬೦ಕ್ಕೆ ಹೆಚ್ಚಿಸಿ ೧೯೭೪ರ ಹೊತ್ತಿಗೆ ಸರಛಾರ್ಜ್‌ನ್ನು ಶೇ. ೧೦೦ ಕ್ಕೆ ಏರಿಸಲಾಯಿತು.

೧೯೮೨ ಜುಲೈನಲ್ಲಿ ಪ್ರವೇಶ ಶುಲ್ಕದ ಮೇಲಿನ ತೆರಿಗೆಯನ್ನು, ಅಧಿಕ ತೆರಿಗೆಯನ್ನು ರದ್ದು ಮಾಡಿ ಪ್ರವೇಶಶುಲ್ಕವನ್ನು ಹೆಚ್ಚು ಮಾಡಲಾಯಿತು. ೧೯೮೫ ಏಪ್ರಿಲ್ ನಿಂದ ಥಿಯೇಟರ್‌ಗಳಲ್ಲಿ ಪ್ರವೇಶ ಶುಲ್ಕವನ್ನು ಪುನಃ ಹೆಚ್ಚಿಸಲಾಯಿತು. ಮನರಂಜನಾ ತೆರಿಗೆಯನ್ನು ಯಾವ ಪ್ರದೇಶದಿಂದ ಪಡೆಯಲಾಗಿದೆಯೋ ಆ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟು ಉಳಿದ ಶೇ. ೧೦ ರಷ್ಟನ್ನು ಸಂಗ್ರಹಣಾ ವೆಚ್ಚಕ್ಕಾಗಿ ಇರಿಸಿಕೊಳ್ಳುತ್ತಿದ್ದರು. ೧೫.೨.೧೯೮೬ರಲ್ಲಿ ಸಿನಿಮಾ ಮಂದಿರಗಳಲ್ಲಿ ಹೊಸ ವ್ಯವಸ್ಥೆಗಳನ್ನು ಮಾಡಲಾಯಿತು. ಅಂದರೆ ೧೫,೦೦೦ವರೆಗೆ ಜನ ಸಂಖ್ಯೆ ಇರುವ ಪ್ರದೇಶಗಳಲ್ಲಿ ಶೇ. ೧೫ ರಂತೆಯೂ ೧೫,೦೦೦ ರಿಂದ ೨೫,೦೦೦ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಶೇ. ೨೫ರಂತೆಯೂ (ಸಿನಿಮಾಮಂದಿರದ ಆಸನಗಳ ಆಧಾರದ ಮೇಲೆ) ತೆರಿಗೆ ವಿಧಿಸಲಾಯಿತು. ಸಿನಿಮಾ ಗೃಹಗಳ ಪ್ರವೇಶದ ಬಗ್ಗೆ ತಹಶೀಲದಾರರು, ಪುರಸಭೆ ಚೀಫ್ ಆಫೀಸರ್ ರವರು, ಪೋಲೀಸ ನಿರೀಕ್ಷಕರು ಹಾಗೂ ಇಲಾಖೆಯ ತನಿಖಾಧಿಕಾರಿಗಳು ತನಿಖೆ ನಡೆಸಲು ಅಧಿಕಾರ ವುಳ್ಳವರಾಗಿದ್ದಾರೆ. ಈ ತೆರಿಗೆಯನ್ನು ಕಾಲ ಕಾಲಕ್ಕೆ ಬದಲಾಯಿಸಲಾಗುತ್ತದೆ.

## ಛಾಪಾ ಕಾಗದ ಮತ್ತು ನೊಂದಣಿ

೧೮೩೧ರಿಂದ ೧೮೬೧ರವರೆಗೆ ನ್ಯಾಯಾಲಯ ಶುಲ್ಕವನ್ನು ಪ್ರಮುಖವಾಗಿ ಹಣದ ರೂಪದಲ್ಲಿ ಪಾವತಿ ಮಾಡಲಾಗುತ್ತಿತ್ತು. ಮತ್ತು ಇದನ್ನು ಒಟ್ಟು ಕಂದಾಯದೊಡನೆ ಸೇರಿಸಲಾಗುತ್ತಿತ್ತು. ೧೮೬೫ರಲ್ಲಿ ಭಾರತೀಯ ಮುದ್ರಾಂಕಿತ ಅಧಿನಿಯಮವನ್ನು ಬಳಕೆಗೆ ತಂದುದರಿಂದ ಸಾಕಷ್ಟು ಲಾಭ ದೊರೆಯುವಂತಾಯಿತು. ನ್ಯಾಯ ಮತ್ತು ನೀತಿ ಎಂಬ ಶಿರ್ಷಿಕೆಗೆ ನ್ಯಾಯಾಲಯ ಶುಲ್ಕ ಮುದ್ರಾಂಕಗಗಳಿಂದ ಬಂದ ಪಾವತಿಯನ್ನು ಜಮಾಮಾಡಲಾಗುತ್ತಿತ್ತು. ೧೮೬೭ರಲ್ಲಿ ಎರಡು ಅಧಿನಿಯಮಗಳು ಅಂದರೆ ಒಂದು ಮುದ್ರಾಂಕಗಳಿಗೆ ಮತ್ತೊಂದು ಇತರೆ ನ್ಯಾಯಾಲಯ ಶುಲ್ಕಗಳಿಗೆ ಮಾಡಲಾಯಿತು.

## ಮೋಟಾರು ವಾಹನ ತೆರಿಗೆ

ಮೋಟಾರು ವಾಹನಗಳ ಮೇಲೆ ತೆರಿಗೆಯನ್ನು ಪ್ರಥಮವಾಗಿ ೧೯೨೪ರಲ್ಲಿ ಜಾರಿಗೆ ತರಲಾಯಿತು. ಈ ತೆರಿಗೆಯು ನೋಂದಣಿಯ ಶುಲ್ಕದ ರೂಪದಲ್ಲಿದ್ದು ವಾಹನಗಳ ವಿಧ ಹಾಗೂ ಅಶ್ವಶಕ್ತಿಯ ಮೇಲೆ ಅವಲಂಬಿಸಿತ್ತು. ೧೯೨೫ರಲ್ಲಿ ಬಸ್ಸುಗಳು ಮತ್ತು ಟ್ಯಾಕ್ಸಿ ಕಾರುಗಳಿಗೆ ಅಧಿಕ ತೆರಿಗೆಯನ್ನು ಬ್ಸಸುಗಳು ಚಲಿಸುವ ದೂರಕ್ಕೆ ಅವಲಂಬಿಸಿ ವಿಧಿಸಲಾಗಿತ್ತು. ಇದರ ಜೊತೆಗೆ ವಾಹನಗಳಿಗೆ ಜಿಲ್ಲಾ ಮಂಡಳಿ ಮತ್ತು ಮುನಿಸಿಪಾಲಿಟಿಗಳು ಪ್ರವೇಶ ತೆರಿಗೆಗಳನ್ನು ವಿಧಿಸಿದವು. ಮೋಟಾರು ವಾಹನಗಳ ಮೇಲಿನ ತೆರಿಗೆಯಿಂದ ಬಂದ ರಾಜಸ್ವವನ್ನು ರಸ್ತೆ ಅಭಿವೃದ್ಧಿಗಾಗಿ ಖರ್ಚುಮಾಡಲಾಗುತ್ತಿತ್ತು.

ರಾಜ್ಯ ಏಕೀಕರಣದ ಸಮಯದಲ್ಲಿ (೧೯೫೬) ವಿಲೀನಗೊಂಡ ಬೇರೆ ಬೇರೆ ಪ್ರದೇಶಗಳಲ್ಲಿ ಮೋಟಾರು ವಾಹನ ತೆರಿಗೆ ಹಾಗೂ ಪ್ರವೇಶ ತೆರಿಗೆಗಳ ಬಗ್ಗೆ ಬೇರೆ ಬೇರೆ ನಿಯಮಗಳಿದ್ದವು. ಕರ್ನಾಟಕ ರಾಜ್ಯದಲ್ಲಿ ಮೋಟಾರು ವಾಹನಗಳ ತೆರಿಗೆ ಪದ್ಧತಿಯಲ್ಲಿ ಏಕರೂಪತೆ ನಿಯಮವನ್ನು ಪಾಲಿಸಲು ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ ೧೯೫೭ಇದನ್ನು ಜಾರಿಗೆ ತರಲಾಯಿತು. ಈ ಅಧಿನಿಯಮದಂತೆ ವಾಹನ ತೆರಿಗೆಯು ಮೋಟಾರ ಸೈಕಲ್‌ಗಳ ಮೇಲೆ ಅವುಗಳ ಅಶ್ವಶಕ್ತಿಗೆ ಅನುಗುಣವಾಗಿ ವಸ್ತುಗಳನ್ನು ಒಯ್ಯುವ ವಾಹನಗಳಿಗೆ ಅವುಗಳ ತೂಕದ ಆಧಾರ ಮೇಲೆ ಮತ್ತು ಪ್ರಯಾಣಿಕರ ವಾಹನಗಳಿಗೆ ಅವುಗಳಲ್ಲಿ ಇರಬಹುದಾದ ಪ್ರಮಾಣಿಕರ ಆಸನಗಳ ಸಂಖ್ಯೆಯ ಆಧಾರದ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಈ ತೆರಿಗೆಯು ತ್ರೈಮಾಸಿಕ, ಅರ್ಧವಾರ್ಷಿಕ, ಅಥವಾ ವಾರ್ಷಿಕವಾಗಿರುತ್ತಿತ್ತು. (ಇತ್ತೀಚೆಗೆ ದ್ವಿಚಕ್ರ ಮತ್ತು ಇತರ ವಾಹನಗಳಿಗೂ ಒಂದೇ ಬಾರಿ ತೆರಿಗೆ ವಸೂಲು ಮಾಡಲಾಗುತ್ತಿದೆ.)

ಮೋಟಾರು ವಾಹನ ಇಲಾಖೆಯು ಈ ಕೆಳಕಂಡ ಅಧಿನಿಯಮಗಳು ಮತ್ತು ನಿಯಮಾಳಿಗಳನ್ನು ಪರಿಪಾಲಿಸುತ್ತಿತ್ತು.

೧) ಮೈಸೂರು ಮೋಟಾರು ವಾಹನ ಅಧಿನಿಯ ೧೯೩೯, ೨) ಕರ್ನಾಟಕ ಮೋಟಾರು ವಾಹನ ತೆರಿಗೆಗಳ ಅಧಿನಿಯಮ ೧೯೫೭, ೩) ಕರ್ನಾಟಕ ಮೋಟಾರು ವಾಹನ ನಿಯಮಗಳು ೧೯೬೩ ಮತ್ತು ೪) ಕರ್ನಾಟಕ ಮೋಟಾರು ವಾಹನ ತೆರಿಗೆ ನಿಯಮಗಳು ೧೯೫೭.

ಗುಲಬರ್ಗಾ ಜಿಲ್ಲೆಯಲ್ಲಿ ತಾಲೂಕು - ವಲಯ - ಗುಂಪುವಾರು, ಬೆಳೆಗಳ ನಿಖರ ದರವನ್ನು ಸೂಚಿಸುವ ಪಟ್ಟಿ.

**ಕೋಷ್ಟಕ ೯.೧**

| ತಾಲೂಕಿನ ಹೆಸರು | ಗುಂಪು | ಗ್ರಾಮಗಳ ಸಂಖ್ಯೆ | ದರಗಳು | | |
|---|---|---|---|---|---|
| | | | ಖುಷ್ಕಿ | ತರಿ | ತೋಟ |
| ಗುಲಬರ್ಗಾ | ೧ | ೮೬ | ೨.೯೧ | ೯.೬೦ | ೨.೯೧ |
| | ೩ | ೮೫ | ೨.೦೪ | ೯.೬೦ | ೨.೦೪ |
| | ೪ | ೨೯ | ೨.೦೪ | ೯.೬೦ | ೨.೦೪ |
| ಅಫಜಲ್‌ಪುರ | ೧ | ೯೦ | ೨.೯೧ | ೯.೬೦ | ೨.೯೧ |
| ಆಳಂದ | ೧ | ೨೫ | ೨.೯೧ | ೯.೬೦ | ೨.೯೧ |
| | ೪ | ೧೭ | ೨.೦೪ | ೯.೬೦ | ೨.೦೪ |
| | ೫ | ೯೨ | ೧.೮೨ | ೯.೬೦ | ೧.೮೨ |
| ಚಿಂಚೋಳಿ | ೧ | ೭೫ | ೨.೯೧ | ೯.೬೦ | ೨.೯೧ |
| | ೨ | ೩೭ | ೨.೬೨ | ೯.೬೦ | ೨.೧೦ |
| | ೪ | ೩೩ | ೨.೦೪ | ೯.೬೦ | ೨.೦೪ |
| ಚಿತ್ತಾಪುರ | ೧ | ೭೪ | ೨.೯೧ | ೯.೬೦ | ೨.೯೧ |
| | ೩ | ೪೨ | ೨.೦೧ | ೯.೬೦ | ೨.೦೪ |
| ಶಹಪುರ | ೧ | ೬೪ | ೨.೯೭ | ೧೧.೮೪ | ೨.೯೭ |
| | ೩ | ೪೭ | ೧.೯೩ | ೧೧.೮೪ | ೧.೯೩ |
| | ೪ | ೪೦ | ೧.೨೪ | ೯.೩೫ | ೧.೨೪ |
| ಯಾದಗಿರ್ | ೨ | ೨೩ | ೨.೬೨ | ೧೧.೮೪ | ೨.೬೨ |
| | ೩ | ೭೯ | ೧.೯೩ | ೧೧.೮೪ | ೧.೯೩ |
| ಸುರಪುರ | ೨ | ೨೭ | ೨.೬೨ | ೧೧.೮೪ | ೨.೬೨ |
| | ೪ | ೩೫ | ೧.೮೮ | ೮.೫೩ | ೧.೮೮ |
| | ೫ | ೭೦ | ೧.೬೩ | ೮.೫೩ | ೧.೬೩ |
| | ೭ | ೫೫ | ೧.೨೦ | ೯.೩೫ | ೧.೨೦ |
| ಜೇವರ್ಗಿ | ೨ | ೧೧೬ | ೨.೬೨ | ೧೧.೮೪ | ೨.೬೨ |
| | ೪ | ೧೨ | ೧.೮೮ | ೮.೫೩ | ೧.೮೮ |
| | ೫ | ೩೦ | ೧.೬೩ | ೮.೫೩ | ೧.೬೩ |

## ಕೋಷ್ಟಕ ೯.೨
## ಗುಲಬರ್ಗಾ ಜಿಲ್ಲೆ ಜಿಲ್ಲಾಧಿಕಾರಿಗಳ ಪಟ್ಟಿ

| ಕ್ರಮ ಸಂಖ್ಯೆ | ಹೆಸರು | ಯಿಂದ | ವರೆಗೆ |
|---|---|---|---|
| ಶ್ರೀ/ಶ್ರೀಮತಿ | | | |
| ೧. | ಎಸ್. ಎ. ಘಾಟ, ಬಿ. ಎ. ಎಲ್.ಎಲ್.ಬಿ. | ೭.೯.೪೮ | ೩೧.೩.೫೧ |
| ೨. | ಎಮ್. ವಿ. ರಾಜ್‌ವಾಡೆ, ಐ.ಎ.ಎಸ್. | ೧.೪.೫೧ | ೨೪.೬.೫೧ |
| ೩. | ಎಕ್ಬಾಲ್‌ಚಂದ್, ಐ.ಎ.ಎಸ್.೨೫.೬.೫೧ | ೧೨.೧.೫೩ | |
| ೪. | ಜಗಜೀವನ್ ಚಂದ್, ಬಿ.ಎ.೧೨.೧.೫೩ | ೫.೩.೫೪ | |
| ೫. | ಬಿ. ವಿ. ಐಯ್ಯಂಗಾರ್, ಐ.ಎ.ಎಸ್. | ೬.೩.೫೪ | ೯.೭.೫೫ |
| ೬. | ಎಮ್. ವಾಸುದೇವರಾವ್, ಐ.ಎ.ಎಸ್. | ೯.೧೦.೫೫ | ೩೧.೧೦.೫೬ |
| ೭. | ಜಿ. ಎಸ್. ಶ್ರೀನಿವಾಸನ್,ಐ.ಎ.ಎಸ್. | ೩೧.೧೦.೫೬ | ೩.೫.೫೭ |
| ೮. | ಎಮ್. ಹೆಚ್. ಪಾರ್ಥಸಾರಿಥಿಎಮ್.ಎಸ್.ಸಿ. | ೧೬.೫.೫೭ | ೨೧.೧೦.೫೬ |
| ೯. | ಐ. ಪಿ. ಮಲ್ಲಪ್ಪ, ಐ.ಎ.ಎಸ್ | ೨೧.೧೧.೫೮ | ೧೧.೭.೬೨ |
| ೧೦. | ಎಮ್. ಶಂಕರ್‌ನಾರಾಯಣ್, ಐ.ಎ.ಎಸ್. | ೨೩.೭.೬೨ | ೯.೮.೬೩ |
| ೧೧. | ಜಿ. ಅಶ್ವಥನಾರಾಯಣ, ಐ.ಎ.ಎಸ್. | ೨೬.೧೨.೬೩ | ೩೦.೯.೬೩ |
| ೧೨. | ಅಹಮ್ಮದ್ ಸಿದ್ದಿಖಿ, ಎಮ್. ಎ. | ೩೦.೯.೬೫ | ೧೬.೫.೬೯ |
| ೧೩. | ಪ್ರತಾಪ್‌ಸಿಂಗ್‌ದರ್ದಿ ಐ.ಎ.ಎಸ್. | ೧೬.೫.೬೯ | ೧.೭.೭೦ |
| ೧೪. | ಎಸ್. ಕೆ. ಗೋಶಾಲ್, ಐ.ಎ.ಎಸ್. | ೧.೭.೭೦ | ೧೮.೧೨.೭೦ |
| ೧೫. | ಎಮ್. ಚಿತ್ತರಂಜನ್‌ದಾಸ್ ಐ.ಎ.ಎಸ್. | ೬.೬.೭೧ | ೧೮.೯.೭೨ |
| ೧೬. | ವಿ. ಬಾಲಸುಬ್ರಮಣ್ಯಂ, ಐ.ಎ.ಎಸ್. | ೧೮.೯.೭೨ | ೭.೫.೭೫ |
| ೧೭. | ಸಿ. ಮುನಿಸ್ವಾಮಿ, ಐ.ಎ.ಎಸ್. | ೧೩.೫.೭೫ | ೧೯.೨.೭೮ |
| ೧೮. | ಸಿ.ಎಮ್. ಚಂದಾವರ್ಕರ್, ಐ.ಎ.ಎಸ್. | ೯.೬.೭೭ | ೩೧.೭.೭೮ |
| ೧೯. | ಅಭಯ್ ಪ್ರಕಾಶ್, ಐ.ಎ.ಎಸ್. | ೧೫.೯.೭೮ | ೧೭.೪.೮೦ |
| ೨೦. | ಎಮ್. ಎಲ್. ಚಂದ್ರಕೀರ್ತಿ, ಐ.ಎ.ಎಸ್. | ೧೭.೪.೮೦ | ೨೦.೫.೮೨ |
| ೨೧. | ಎಸ್. ವಿ. ರಂಗನಾಥ, ಐ.ಎ.ಎಸ್. | ೨೦.೫.೮೨ | ೭.೨.೮೪ |
| ೨೨. | ವಿಜಯ ದೇವಾಷರ್, ಐ.ಎ.ಎಸ್. | ೨೬.೩.೮೪ | ೨೬.೬.೮೪ |
| ೨೩. | ಬಿ. ಎಲ್. ಶ್ರೀಧರ್, ಐ.ಎ.ಎಸ್. | ೨೨.೮.೮೪ | ೧೬.೧೦.೮೬ |
| ೨೪. | ವಿ. ಉಮೇಶ್, ಐ.ಎ.ಎಸ್. | ೧೭.೧೦.೮೬ | ೩೦.೧೧.೮೬ |
| ೨೫. | ಕೆ. ಜ್ಯೋತಿರಾಮಲಿಂಗಮ್ ಐ.ಎ.ಎಸ್. | ೧.೧೨.೮೬ | ೩೦.೩.೮೮ |
| ೨೬. | ಜಿ. ಕೆ. ಲೋಕರೆ, ಐ.ಎ.ಎಸ್. | ೩೦.೩.೮೮ | ೨೪.೧೦.೮೯ |
| ೨೭. | ಸುಭಾಷ್ ಚಂದ್ರ ಕುಂಟಿಯ, ಐ.ಎ.ಎಸ್. | ೨೭.೧೦.೮೯ | ೧.೮.೯೧ |

| | | | | |
|---|---|---|---|---|
| ೨೮. | ಇ. ವೆಂಕಟಯ್ಯ, ಐ.ಎ.ಎಸ್. | ೧.೮.೯೧ | ೧೧.೫.೯೩ | --- |
| ೨೯. | ಅಶೋಕ್ ಕುಮಾರ್ ಸಿ. ಮನೋಲಿ, ಐ.ಎ.ಎಸ್. | ೧೧.೫.೯೩ | ೨೯.೪.೯೪ | |
| ೩೦. | ಎಮ್. ಮದನ್ ಗೋಪಾಲ್, ಐ.ಎ.ಎಸ್. | ೨೯.೪.೯೪ | ೨೮.೩.೯೫ | |
| ೩೧. | ಸಿ. ಕೃಷ್ಣಪ್ಪ, ಐ.ಎ.ಎಸ್. | ೨೯.೦೫.೯೫ | ೧೮.೦೩.೯೬ | |
| ೩೨ | ಯೋಗೀಂದ್ರ ತ್ರಿಪಾಠಿ, ಐ.ಎ.ಎಸ್. | ೧೮.೦೩.೯೬ | ೩೧.೦೭.೯೬ | |
| ೩೩. | ಅನಿಲಕುಮಾರ ಝಾ | ೩೧.೦೭.೯೬ | --- | |

## ಮೋಟಾರು ವಾಹನ ಇಲಾಖೆ, ಗುಲಬರ್ಗಾ ಜಿಲ್ಲೆ

### ಜಿಲ್ಲೆಯಲ್ಲಿ ಮೋಟಾರು ವಾಹನ ತೆರಿಗೆ ವಸೂಲಿಯ ವಿವರ

| ವರ್ಷ | ಶುಲ್ಕ ರೂ. | ತೆರಿಗೆ ರೂ. | ಮೊತ್ತ ರೂ. |
|---|---|---|---|
| ೧೯೯೦-೯೧ | ೨೮,೩೨,೦೧೫ | ೧,೬೩,೭೧,೬೦೩ | ೧,೯೨,೦೩,೬೧೮ |
| ೧೯೯೧-೯೨ | ೩೧,೭೬,೨೪೫ | ೧,೬೫,೫೧,೯೫೫ | ೧,೯೭,೨೮,೨೦೦ |
| ೧೯೯೨-೯೩ | ೨೯,೩೩,೫೨೯ | ೧,೮೦,೨೮,೭೪೮ | ೨,೦೯,೬೨,೨೭೭ |
| ೧೯೯೩-೯೪ | ೪೦,೦೯,೧೯೦ | ೧,೦೬,೦೪,೮೦೮ | ೨,೨೬,೧೪,೦೦೭ |
| ೧೯೯೪-೯೫ | ೪೨,೧೬,೦೪೦ | ೨,೨೨,೭೧,೬೯೪ | ೨,೬೪,೮೭,೭೩೪ |

**ಕೋಷ್ಟಕ ೯.೬.**

ಗುಲಬರ್ಗಾ ಜಿಲ್ಲೆಯಲ್ಲಿ ೧೯೯೦-೯೧ರಿಂದ ೧೯೯೪-೯೫ರ ವರೆಗೆ ಅಬಕಾರಿ ಸುಂಕ ವಸೂಲಾತಿ ವಿವರ

| ವರ್ಷ | ವಸ್ತುಗಳ ಸಂಖ್ಯೆ | ಕೋಟಿ ರೂಗಳಲ್ಲಿ |
|---|---|---|
| ೧೯೯೦-೯೧ | ೧೫ | ೭೮.೭೦ |
| ೧೯೯೧-೯೨ | ೧೮ | ೯೮.೨೭ |
| ೧೯೯೨-೯೩ | ೨೧ | ೧೪೯.೬೫ |
| ೧೯೯೩-೯೪ | ೨೫ | ೧೫೧.೯೧ |
| ೧೯೯೪-೯೫ | ೨೫ | ೯೦.೩೬ |

**ವಲಯವಾರು ತೆರಿಗೆ (೧೯೯೪-೯೫)**

| | |
|---|---|
| ೧. ಗುಲಬರ್ಗಾ 'ಎ' ವಲಯ | ೨೯.೫೯. ಕೋಟಿ ರೂ. |
| ೨. ಗುಲಬರ್ಗಾ 'ಬಿ' ವಲಯ | ೧೫.೧೪ ಕೋಟಿ ರೂ. |
| ೩. ಶಹಾಬಾದ್ ವಲಯ | ೯.೦೧ ಕೋಟಿ ರೂ. |
| ೪. ಯಾದಗಿರಿ ವಲಯ | ೩೬.೧೩. ಕೋಟಿ ರೂ. |

## ಕೋಷ್ಟಕ ೯.೭

ಗುಲಬರ್ಗಾ ಜಿಲ್ಲೆಯಲ್ಲಿ ೧೯೮೪-೮೫ರಿಂದ ಹತ್ತು ವರ್ಷಗಳ ವಿವಿಧ ನಿಯಮಾವಳಿಗಳ ಮೂಲಕ ಶೇಖರಿಸಿದ ತೆರಿಗೆಗಳನ್ನು ತೋರಿಸುವ ಪಟ್ಟಿ

(ಲಕ್ಷ ರೂ.ಗಳಲ್ಲಿ)

| ಕ್ರಮ ಸಂ. | ತಿಂಗಳು | ೮೪-೮೫ | ೮೫-೮೬ | ೮೬-೮೭ | ೮೭-೮೮ | ೮೮-೮೯ | ೮೯-೯೦ | ೯೦-೯೧ | ೯೧-೯೨ | ೯೨-೯೩ | ೯೩-೯೪ | ೯೪-೯೫ |
|---|---|---|---|---|---|---|---|---|---|---|---|---|
| ೧. | ಏಪ್ರಿಲ್ | --- | ೧೩೨೦ | ೧೮೨೦ | ೨೧೦೦ | ೩೨೫೦ | ೫೭೫೯ | ೫೧೦೦ | ೮೬೧೫ | ೧೨೨೫೦ | ೧೮೦೦೦ | ೬೪೮೦೮ |
| ೨. | ಮೇ | --- | ೨೦೧೭೫ | ೨೦೦ | ೧೦೦ | ೪೦೭೫ | ೫೦೦೦ | ೧೬೦೬೭ | ೪೮೯೬೫ | ೬೮೭೫ | ೨೩೪೨೫ | ೫೧೫೫೧ |
| ೩. | ಜೂನ್ | --- | ೧೨೦೨೫ | ೨೪೭೦ | ೪೩೫೦ | ೯೭೪೦ | ೭೫೦೬ | ೧೯೨೫೮ | ೭೪೫೦ | ೫೦೬೭೫ | ೯೩೨೪೮ | ೪೯೨೫೦ |
| ೪. | ಜುಲೈ | ೩೩೩೨ | ೭೧೦ | ೪೫೦ | ೧೭೨೫ | ೩೫೦೦ | ೧೮೫೦ | ೨೬೦೦ | ೩೭೯೭೨ | ೧೦೬೫೦ | ೩೭೪೦೭ | ೫೨೮೦೦ |
| ೫. | ಆಗಸ್ಟ್ | --- | --- | ೮೩೪೦ | ೪೦೫೦ | ೧೫೪೦ | ೨೫೨೦ | ೧೪೦೦ | ೫೭೦೦ | ೬೦೦೦ | ೪೮೫೫೦ | ೪೯೧೧೭ |
| ೬. | ಸೆಪ್ಟೆಂಬರ್ | ೨೧೫ | ೬೨೫ | ೧೦೫೪೦ | ೩೧೦೦ | | ೧೭೦೦ | ೪೨೦೦ | ೩೩೦೦ | ೮೨೦೦ | ೬೨೨೧೮ | ೨೦೧೫೦ |
| ೭. | ಅಕ್ಟೋಬರ್ | ೧೧೫೦ | --- | ೧೦೭೨೫ | ೨೭೦೦ | ೧೦೫೦ | ೫೩೦೦ | ೫೫೦೦ | ೬೮೦೦ | ೪೫೦ | ೪೧೫೮೫ | ೧೩೩೦೦ |
| ೮. | ನವೆಂಬರ್ | ೯೦೯೦ | ೧೧೦೦ | ೧೦೯೫೦ | ೬೩೫೦ | ೫೨೫೦ | ೪೪೦೦ | ೧೬೪೦೦ | ೧೦೮೫೦ | ೬೭೫ | ೧೩೩೫೦ | ೧೦೨೦೦ |
| ೯. | ಡಿಸೆಂಬರ್ | ೨೭೩೦ | --- | ೧೨೭೮೮ | ೨೧೬೫ | ೩೮೪೬ | ೨೨೦೦ | ೭೭೫೦ | ೬೮೦೦ | ೧೪೦೦ | ೧೫೫೦ | --- |
| ೧೦. | ಜನವರಿ | ೨೦೭೫ | ೫೦೨೫ | ೫೮೦೦ | ೩೨೩೫ | ೬೬೦೦ | ೫೨೫೦ | ೯೮೦೧ | ೪೨೦೫ | ೧೦೦ | ೧೧೦೦೦ | --- |
| ೧೧. | ಫೆಬ್ರವರಿ | ೧೪೭೫ | ೨೬೭೦ | ೩೮೫೦ | ೪೭೨೫ | ೮೫೨೦ | ೫೦೦೨ | ೬೮೧೯ | ೩೬೩೫ | ೫೮೫೦ | ೩೪೨೩೨೫ | --- |
| ೧೨. | ಮಾರ್ಚ್ | ೧೩೭೫ | ೧೧೦೦ | ೧೨೮೦೫ | ೪೦೦೦ | ೧೨೧೯೫ | ೫೮೫೦ | ೧೨೯೦೦ | ೩೬೮೩ | ೧೯೫೯೪ | ೧೧೬೬೪೯೨ | --- |
| | ಒಟ್ಟು | ೨೧೪೪೨ | ೪೪೭೫೦ | ೮೦೭೩೮ | ೩೮೫೯೦ | ೫೯೫೩೦ | ೫೨೩೪೨ | ೧೦೭೭೯೫ | ೧೪೭೯೭೫ | ೧೨೨೭೧೯ | ೧೮೫೨೯೫೦ | ೩೧೧೧೭೬ |